A Circumnavigation to the world of Dance and Performing Arts : A complete Journal

ನೂಪುರ ಭ್ರಮರಿ
... ನರ್ತನ ಜಗತ್ತಿಗೊಂದು ಪರಿಭ್ರಮಣ

RNI No :KARKAN/2009/29752

ಚೈತ್ರ-ವೈಶಾಖ 2011

ಸಂಚಿಕೆ : 2 ಸಂಪುಟ : 5

ಸಂಪಾದಕರು : ಮನೋರಮಾ ಬಿ.ಎನ್.

ಪ್ರಸರಣಾಧಿಕಾರಿ : ವಿಷ್ಣುಪ್ರಸಾದ್ ನಿಡ್ಡಾಜೆ

ಕಛೇರಿ ನಿರ್ವಹಣೆ : ರಾಜ್‌ಗೋಪಾಲ್ ಬಿ.ಎನ್.

ಪ್ರಕಾಶನ : ಶ್ರೀ ಸಾನ್ನಿಧ್ಯ ಪ್ರಕಾಶನ (ರಿ.), ಮಡಿಕೇರಿ

ರಕ್ಷಾಪುಟ ವಿನ್ಯಾಸ : ಎನ್.ವೈದ್ಯ ಹೆಗ್ಗಾರ್, ಬೆಂಗಳೂರು.

## ಶಿಶಿರ ಶೃಂಗಾರ

ಅಂತರಂಗ.....


- ಮಂಜೀರ.......... 2
- ಲಲಿತ ಲಹರಿ : ಅಷ್ಟನಾಯಿಕೆಯರ ಚಿತ್ತವೃತ್ತಿ.......... 7
- ರಂಗ ಭ್ರಮರಿ.......... 13
- ನಿಮ್ಮ ಬರೆಹ ನಮ್ಮ ಓದು.......... 15
- ಅಂಗಳದ ಮಾತು ತಿಂಗಳ ಚರ್ಚೆ...ಮಧುರ ಭಕ್ತಿ v/s ಶೃಂಗಾರ.......... 16
- ರಂಗಸ್ಥಳ : ಭಟ್ಟರ ಬದುಕಿನ ರೋಚಕ ಕಥೆಗಳು ! .......... 17
- ಅಂಗಳದ ಮಾತು ತಿಂಗಳ ಚರ್ಚೆ....ಭಾಗವತಿಕೆ v/s ರಂಗಾಭಿನಯ.......... 18
- ಹಸ್ತ ಮಯೂರಿ : ಮುಕುಳ ಹಸ್ತ.......... 19
- ದರ್ಪಣ : ನೃತ್ಯರಂಗದ ಅನಭಿಷಿಕ್ತ ರಾಣಿ ರುಕ್ಮಿಣಿ.......... 22


All rights reserved. Reproduction in any manner, electronic or otherwise, in whole or in part without prior written permission is prohibited. Views and Opinions expressed by authors in the articles published in NOOPURA BHRAMARI are their own not of Noopura Bhramari.

Visit our website : **www.noopurabhramari.com**
for the latest news, views and other updates.

ನೂಪುರ ಭ್ರಮರಿಗೆ ಲೇಖನ-ವಿವರ-ವಿಚಾರ-ಅಭಿಪ್ರಾಯ ಇತ್ಯಾದಿಗಳನ್ನು ಬರೆಯುವವರು
ಪ್ರತೀ ಎರಡನೇ ತಿಂಗಳ 10ನೇ ತಾರೀಕಿನ ಒಳಗಾಗಿ ಕಳಿಸಬೇಕಾಗಿ ಕೋರಿಕೆ.

## ಮಂಜೀರ

## ಪಂಚಮದ ಪಲುಕಿಗೆ ಶ್ರುತಿಯಾಗಿ...
## ಮಾರ್ಗಕ್ಕೆ ಮುಕುರವಾಗಿ...

**13 ಫೆಬ್ರವರಿ 2011 ರಂದು 'ನಯನ ಸಭಾಂಗಣ' , ಕನ್ನಡ ಭವನ, ಜೆ.ಸಿ ರಸ್ತೆ , ಬೆಂಗಳೂರು.**

**ನೂ**ಪುರ ಭ್ರಮರಿ ಐದನೇ ಸಂವತ್ಸರಕ್ಕೆ ಅಡಿಯಿಡುವ ಸಂವತ್ಸರಾಭಿನಂದನ ಸಂಭ್ರಮ ನಿಜಕ್ಕೂ ಒಂದು ಆಪ್ತ ಮತ್ತು ಅಷ್ಟೇ ಆಕಸ್ಮಿಕವೂ ಕೂಡಾ. ಹಾಗೆ ನೋಡಿದರೆ ಬೆಂಗಳೂರಿನಂತಹ ಮಹಾ ಸಮುದ್ರದಲ್ಲಿ ಕಾರ್ಯಕ್ರಮ ಸಂಘಟಿಸುವ ಇರಾದೆ, ಧೈರ್ಯ ಮೊದಲು ಅಷ್ಟಾಗಿ ಇರಲಿಲ್ಲ. ಆದರೆ ಮನದೊಳಡಗಿದ್ದ ಸಂಭ್ರಮವನ್ನು ಹಂಚಿಕೊಳ್ಳುವ ಕಂಡೂ ಕಾಣದಂತಿದ್ದ ಅಭೀಪ್ಸೆಗೆ ಇಂಬನ್ನಿತ್ತದ್ದು ದೈವಬಲ, ಹಿರಿಯರ ಆಶೀರ್ವಾದ, ನಿಕಟವರ್ತಿ




ಗೆಳೆಯರು. ಜೊತೆಗೆ ನೃತ್ಯ ಸಂವೇದನೆಗಳಿಗೆ ಹೊಸ ಆಯಾಮವನ್ನು ನಮ್ಮಿಂದಾದಷ್ಟೂ ನೀಡಬೇಕೆಂಬ ತುಡಿತ. ಪರಿಣಾಮ, ಕರ್ನಾಟಕದ ಇತಿಹಾಸದಲ್ಲೇ ಮೊತ್ತ ಮೊದಲ ಬಾರಿಗೆ ನೃತ್ಯ/ನಾಟ್ಯ ವಿಮರ್ಶಕರನ್ನು ಗುರುತಿಸಿ ವರ್ಷದ ವಿಮರ್ಶೆ ಪ್ರಶಸ್ತಿಯನ್ನು ನೀಡಬೇಕೆಂಬ ಚಿಂತನೆ; ಭರತನಾಟ್ಯದ ಕಪೋಲಕಲ್ಪಿತ ನಂಬಿಕೆಗಳನ್ನು ಆಧಾರ ಸಹಿತವಾಗಿ ನಿರೂಪಿಸುವ ಛಲದ ಪ್ರತಿರೂಪ ವಾಗಿ 'ನೃತ್ಯ ಮಾರ್ಗ ಮುಕುರ' ಅನಾವರಣವು ನೂಪುರದ ಪಾಲಿಗೆ ಅತ್ಯಪೂರ್ವ ಕ್ಷಣವೆಂದೇ ಹೇಳಬಹುದು.

ಉದ್ದೇಶ ಒಳ್ಳೆಯದಾದಷ್ಟೂ ಅದರ ಸತ್ತ್ವನಿರೂಪಣೆಗೆ ಪರೀಕ್ಷೆಗಳು ಸಾವಿರಾರು. ಕಾರ್ಯಕ್ರಮ ಸಂಘಟಿಸುವ ಪ್ರಾಥಮಿಕ ಹಂತದಿಂದಲೇ ಒಂದಲ್ಲ ಒಂದು ವಿಘ್ನಗಳು ಬಾಧಿಸಿ ಧೃತಿಗೆಡಿಸಿದ್ದು ಸುಳ್ಳಲ್ಲ. ವಿಘ್ನಸಂತೋಷಿಗಳು, ಕುತ್ಸಿತರು, ಕುಟುಕಿ–ಮೆಟ್ಟುವವರು, ಸ್ವಹಿತಾಸಕ್ತಿಪೀಡಿತರ ಸಂಖ್ಯೆ ಕಡಿಮೆಯೇನಲ್ಲ. ಆದರೇನಾಯಿತು? ಸಂಕಲ್ಪದ



ಮುಂದೆ ಸಾವೂ ಹಿಮ್ಮೆಟ್ಟುವಂತೆ ಫಲಾಫಲಗಳನ್ನು ಅಮೂರ್ತಕ್ಕೆ ಬಿಟ್ಟು ನಿರ್ಲಿಪ್ತವಾಗಿಯೇ ಹೆಜ್ಜೆಗಳನ್ನು ಮುಂದಿರಿಸಿದೆವು. ಕೊನೆಗೂ ನಿರೀಕ್ಷೆಗಳು ಹುಸಿಯಾಗಲಿಲ್ಲ. ನಯನ ಸಭಾಂಗಣ ಕಿಕ್ಕಿರಿದು ತುಂಬಿತ್ತು. ಸಂಜೆ 4.30ಯಿಂದ ರಾತ್ರಿ 9 ಗಂಟೆಯ ವರೆಗೂ 2 ಪುಸ್ತಕ, 2 ವಿಶೇಷ ಸಂಚಿಕೆ ಅನಾವರಣ, ಆರು ಮಂದಿ ಗಣ್ಯರ ನಲ್ನುಡಿಗಳು, ವಿಮರ್ಶಾ ಪ್ರಶಸ್ತಿ ಪ್ರದಾನ, ಕಥಾ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ, 4 ಮಂದಿಗೆ ಸನ್ಮಾನ ಸಮಾರಂಭ, ಅವರ ಮನದಾಳದ ಅನಿಸಿಕೆಗಳು, ಬಳಗದ ಹೆಮ್ಮೆಯ ಸಾಧಕರಿಗೆ ಮತ್ತು ಶ್ರಮಿಕರಿಗೆ ಅಭಿವಂದನೆ, ಡಿವಿಜಿಯವರ ಅಂತಃಪುರ ಗೀತೆಗಳಿಗೆ ನೃತ್ಯ... ಒಟ್ಟಿನಲ್ಲಿ ಕಾರ್ಯಕ್ರಮದ ಯಶಸ್ಸು ಧನ್ಯತೆಯ ಹನಿಗಳನ್ನು ಕಣ್ಣಂಚಿನಲ್ಲಿ ತರಿಸಿದ್ದು ಎಂದೆಂದಿಗೂ ಸ್ಮೃತಿಪಟಲದಲ್ಲಿ ಅನುಭವವಾಗಿ, ನೆನಪಾಗಿ ಜೊತೆಗಿರುತ್ತದೆ.

ಅಂದು ನಮ್ಮೊಂದಿಗೆ ವೇದಿಕೆಯಲ್ಲಿ ಒಂದಲ್ಲ ಎರಡಲ್ಲ, ಪ್ರೀತಿ, ವಿಶ್ವಾಸಗಳ ಒರತೆಯನ್ನೇ ನಂಬುವ ಐವರು ಘನತೆವೆತ್ತ ಹಿರಿಯರಿದ್ದರು. ಶತಾವಧಾನಿ ಡಾ. ಆರ್. ಗಣೇಶ್ ಅವರ ಅನಾರೋಗ್ಯದಿಂದಾಗಿ ಅನುಪಸ್ಥಿತಿ ಬೇಸರವನ್ನು ತರಿಸಿತ್ತಾದರೂ ಅವರ ಆಶೀರ್ವಾದ, ಬೆಂಬಲ ನಮ್ಮನ್ನು ಕೈಬಿಟ್ಟಿರಲಿಲ್ಲ. ಕರ್ನಾಟಕ ಅನುವಾದ ಅಕಾಡೆಮಿ ಅಧ್ಯಕ್ಷರಾಗಿದ್ದ ಪ್ರಸ್ತುತ ಕುವೆಂಪು ಭಾಷಾ ಭಾರತಿಯ ಅಧ್ಯಕ್ಷರಾದ ಡಾ. ಪ್ರಧಾನ್ ಗುರುದತ್ ಅತ್ಯಲ್ಪ ಸಮಯದಲ್ಲೇ ನಮ್ಮ ಕರೆಗೆ ಓಗೊಟ್ಟು ಬಂದು ಸಮಾರಂಭದ ಅಧ್ಯಕ್ಷರಾಗಿ ಬೆನ್ನು ತಟ್ಟಿದ್ದರು. ಶತಾವಧಾನಿ ಗಣೇಶ್‌ರ ಶಿಷ್ಯ, ಮನಶಾಸ್ತ್ರಜ್ಞ ಮತ್ತು ಸ್ವತಃ **ಚಿತ್ರಕಾವ್ಯ ಪರಿಣತರು, ಪೃಚ್ಛಕರೂ**, ಅಷ್ಟಾವಧಾನಿಗಳೂ ಆದ ಡಾ. ಆರ್. ಶಂಕರ್‌ರ ಪರಿಚಯ ಹೊಸತಾದರೂ ಅಷ್ಟೂ ರೂಪುರೇಷೆಗಳನ್ನು ಪ್ರೀತಿಯಿಂದ ಆಲಿಸಿ




ಕಾರ್ಯಕ್ರಮದುದ್ದಕ್ಕೂ ಜೊತೆಗಿದ್ದರು. ನೂಪುರದ ಬೆಳವಣಿಗೆಯನ್ನು ಬಹಳಷ್ಟು ವರ್ಷಗಳಿಂದ ನೋಡುತ್ತಾ, ಗಮನಿಸುತ್ತಾ, ಪ್ರತಿಕ್ರಿಯಿಸುತ್ತಾ ಬಂದಿರುವ ವಿಮರ್ಶಕರೂ, ಪ್ರಾಧ್ಯಾಪಕರೂ ಆದ ಡಾ. ಜಿ. ಬಿ. ಹರೀಶ್ ಭರವಸೆಯ ನುಡಿಗಳನ್ನಾಡಿದ್ದರು. ಧಾರವಾಡದ ಯಕ್ಷಗಾನ ಸಾಹಿತಿ ಮತ್ತು ಸನ್ಮಿತ್ರರೂ ಕವಿಗಳೂ ಆದ ದಿವಾಕರ ಹೆಗಡೆ ಮನೆಮಂದಿಯಲ್ಲೊಬ್ಬ



ರಾಗಿ ಆತ್ಮೀಯವಾಗಿ ಬೆರೆತು ಸಂವಾದ ನಡೆಸಿದರೆ; ಕರವಾಣಿಯು ಕರೆಗೂ ಪ್ರೀತಿ ಸೂಚಿಸಿ ತಮ್ಮ 86ರ ಇಳಿವಯಸ್ಸಿನಲ್ಲೂ, ಅನಾರೋಗ್ಯದ ನಡುವೆಯೂ ದೂರದ ಮಂಗಳೂರಿನಿಂದ ಹಿರಿಯ ನಾಟ್ಯಾಚಾರ್ಯ ಕೆ. ಮುರಳೀಧರ್ ರಾವ್ ಅವರು ಬಂದು ಕೃತಿಯ ಮೊದಲ ಪ್ರತಿಗಳನ್ನು ಸ್ವೀಕರಿಸಿದ್ದು ನಿಜಕ್ಕೂ ಮತ್ತೊಂದು ಧನ್ಯತೆಯ ಕ್ಷಣ.

ಅಂದಿನದು ಒಂದು ಬಗೆಯ ಜಂಟಿ ಸಮಾರಂಭ. ಸೋದರೀ ಪತ್ರಿಕೆಗಳಾದ ನೂಪುರ ಭ್ರಮರಿ, ಚೈತ್ರರಶ್ಮಿ ಪರಸ್ಪರ ಜೊತೆಗೂಡಿದ್ದವು. ಚೈತ್ರರಶ್ಮಿ ಪ್ರತಿಕೆ ತನ್ನ 6ನೇ ವರ್ಷದ ಸಂಭ್ರಮಕ್ಕಾಗಿ ರಾಜ್ಯ ಮಟ್ಟದ ಕಥಾಸ್ಪರ್ಧೆಯನ್ನು ಹಮ್ಮಿಕೊಂಡಿತ್ತು. ಗ್ರಾಮೀಣ, ಹೊಸ ಕಥೆಗಾರರ ಅನ್ವೇಷಣೆಯಲ್ಲಿ ಐವತ್ತು ಮಂದಿ ಕಥೆಗಾರರ ನಡುವೆ ಸ್ಪರ್ಧೆಯಿತ್ತು. ಫಲವಾಗಿ 10 ಮಂದಿ ವಿಜೇತ ಸ್ಪರ್ಧಿಗಳ ಕಥಾಸಂಕಲನ 'ಕನ್ನಡಿ ಬಿಂಬದ ನೆರಳು' ಅನಾವರಣವನ್ನೂ ಒಳಗೊಂಡಿತ್ತು. ವಿಕಲಚೇತನ ಈಜು ಕ್ರೀಡಾಪಟು ಏಕಲವ್ಯ ಪ್ರಶಸ್ತಿ ವಿಜೇತ ರಾಘವೇಂದ್ರ ಅಣ್ವೇಕರ್ ಮತ್ತು ಸಾಮಾಜಿಕ ಕಾರ್ಯಕರ್ತ ನಾಗರಾಜ ನಾವುಂದ ಅವರಿಗೆ ಸನ್ಮಾನಿಸುವಾಗಲಂತೂ ಅವರ ಜೀವನದ ಕೆಚ್ಚೆದೆಯ ಹೋರಾಟ ಮತ್ತು ಸಾಧನೆಯ ತುಡಿತವನ್ನು ಕಂಡು ಕಣ್ಣಲ್ಲಿ ನೀರು ಜಿನುಗಿದ್ದು ಸುಳ್ಳಲ್ಲ. ನಿಜಕ್ಕೂ ಅದು ಉತ್ಸಾಹದ ಸೆಲೆಯನ್ನು ಜೀವಂತ ವಾಗಿಸುವ, ಜೀವನ ಚೈತನ್ಯ ಕೊಡುವ ಕ್ಷಣ.

ರಸ–ನಾಟ್ಯ ವಿಷಯಗಳ ಕುರಿತಂತೆ ಮಾತ ನಾಡುತ್ತಾ, ರಸನಿರೂಪಣೆಯೇ ಕಲೆಯ ಅತ್ಯುನ್ನತ ಸಾಧನೆ ಎನ್ನುವ ಸಾರಾಂಶವನ್ನು ಹೇಳುವ 'ನೃತ್ಯ ಮಾರ್ಗ ಮುಕುರ' ಕೃತಿ, ಭರತನಾಟ್ಯದ ಸಮಕಾಲೀನ ಬದಲಾವಣೆ, ಬೆಳವಣಿಗೆ, ವ್ಯತ್ಯಾಸ, ಲೋಪದೋಷ, ಗುಣಾವಗುಣಗಳನ್ನೂ ಸಾಕ್ಷ್ಯ ಸಮೇತ ವಿಶ್ಲೇಷಿಸಿದೆ. ಪುಷ್ಪಾಂಜಲಿ, ಅಲಾರಿಪ್ಪು ಮುಂತಾದ ನರ್ತನಪ್ರಕಾರಗಳಿಂದ ಮೊದಲ್ಗೊಂಡು ತಮಿಳ್ನಾಡು ಮತ್ತು ಮೈಸೂರು ಪರಂಪರೆಗಳಲ್ಲಿ ಬೆಳೆದುಬಂದ ವಿವಿಧ ನೃತ್ಯಾಂಗಗಳನ್ನೂ ಸೂಕ್ತ ದಾಖಲೆ, ಹಿನ್ನಲೆಗಳೊಂದಿಗೆ ಮೆಟ್ಟಿಲಿನೋಪಾದಿಯಲ್ಲಿ





ಚರ್ಚಿಸಿದೆ. ನೃತ್ಯಕ್ಷೇತ್ರದ ಹಿರಿಯರ ಸಂದರ್ಶನ, ಗ್ರಂಥ ಪರಾಮರ್ಶನ, ಅವಲೋಕನ, ಕ್ಷೇತ್ರಕಾರ್ಯಾಧಾರಿತ ಸಂಶೋಧನೆಯಿಂದ 'ನೃತ್ಯಮಾರ್ಗ ಮುಕುರ'ದ ವಿಷಯ ವಿಶ್ಲೇಷಣೆ ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ಇಂದಿನ ಭರತನಾಟ್ಯಕ್ಷೇತ್ರದ ಅಗತ್ಯ, ಅನಿವಾರ್ಯತೆ, ಸಮಸ್ಯೆಗಳಿಗೆ ಕನ್ನಡಿ ಹಿಡಿದಿರುವ ಈ ಪುಸ್ತಕ ನೃತ್ಯಕ್ಷೇತ್ರದ ಒಂದು ಕೊಡುಗೆ ಮತ್ತು ನಿಜಕ್ಕೂ ಮಾರ್ಗ ಮುಕುರವೆಂಬ ಹೆಸರಿಗೆ ಅನ್ವರ್ಥ ಎಂದು ಕೃತಿ ಅನಾವರಣಗೊಳಿಸಿ ವಿಶ್ಲೇಷಣೆಯನ್ನಿತ್ತವರು **ಡಾ. ಆರ್. ಶಂಕರ್.**

ದಿನದಿಂದ ದಿನಕ್ಕೆ ಸಾಂಸ್ಕೃತಿಕ ರಂಗದ ಅದರಲ್ಲೂ ನರ್ತನ ಕ್ಷೇತ್ರದ ವಿಮರ್ಶಾಪರಂಪರೆ ಕುಸಿಯುತ್ತಿರುವಾಗ ವಿಮರ್ಶಕರನ್ನು ಗುರುತಿಸಿ, ಗೌರವಿಸುವ ದೃಷ್ಟಿಯಿಂದಷ್ಟೇ ಅಲ್ಲದೆ, ಈ ಕ್ಷೇತ್ರದ ಜವಾಬ್ದಾರಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ **ವರ್ಷದ ಶ್ರೇಷ್ಠ ನೃತ್ಯ ವಿಮರ್ಶೆ ಪ್ರಶಸ್ತಿ**ಯನ್ನು **ಕರ್ನಾಟಕದಲ್ಲೇ ಮೊತ್ತ ಮೊದಲಬಾರಿಗೆ** ನೂಪುರ ಭ್ರಮರಿ ಆರಂಭಿಸಿದ್ದು ನಿಜಕ್ಕೂ ಒಂದು ಹೆಗ್ಗಳಿಕೆ. ಕರ್ನಾಟಕದ ಉದ್ದಗಲಕ್ಕೂ ಇದ್ದ ವಿಮರ್ಶಕರು, ಬರೆಹಗಾರರು ತಮ್ಮ ವಿಮರ್ಶೆಗಳನ್ನು ಕಳಿಸಿಕೊಟ್ಟು ಸ್ಪರ್ಧೆಯ ಆರಂಭಿಕ ವರ್ಷಕ್ಕೆ ಉತ್ತಮ ಮುನ್ನುಡಿ ಹಾಕಿದ್ದರು. ಶತಾವಧಾನಿ ಡಾ. ಆರ್. ಗಣೇಶ್ ಅವರ ಬೆಂಬಲ, ಸಾಂತ್ವನಗಳು ಸ್ಪರ್ಧೆಯ ಮೌಲ್ಯವನ್ನು ಮತ್ತಷ್ಟೂ ಹೆಚ್ಚಿಸಿದ್ದವು. ಹೀಗೆ, ಹೊಸ ಹುರುಪಿನ ನಡಿಗೆಗೆ ಸಾಕ್ಷಿಯಾಗಿ ಈ ಪ್ರಶಸ್ತಿಗೆ ಮೊದಲು ಭಾಜನರಾದವರು ಪ್ರಸ್ತುತ ಹೈದರಾಬಾದಿನಲ್ಲಿ ನೆಲೆಸಿರುವ ಕರ್ನಾಟಕದವರೇ ಆದ ಯುವ ಬರಹಗಾರ್ತಿ **ಶ್ರೀಮತಿ ಪ್ರಿಯಾ ರಾಮನ್.** ತೀರ್ಪುಗಾರಿಕೆಗೆ ಸಹಕರಿಸಿದ ನೃತ್ಯಕ್ಷೇತ್ರದ ಅನುಭವೀ, ಹಿರಿಯ ವಿದ್ವನ್ಮಣಿಗಳಿಗೆ ಈ ನಿಟ್ಟಿನಲ್ಲಿ ಸಾದರ ಕೃತಜ್ಞತೆ ಸಲ್ಲಲೇಬೇಕು.

ದೇಹದ ಎಲ್ಲಾ ಅಶುದ್ಧ ರಕ್ತವನ್ನು ನಿತ್ಯ ಶುದ್ಧ ಮಾಡುವ ಹೃದಯ ಶರೀರದ ಪುಟ್ಟ ಘಟಕ. ಅಲ್ಲಿ ನಡೆಯುವ ಕೆಲಸ-ಕರ್ತವ್ಯ ಇಡೀ ಜೀವಮಾನದ ಶಕ್ತಿ. ಅಂತೆಯೇ ಸಮಾಜದಲ್ಲಿ ನಡೆಯುವ ಪುಟ್ಟ ಪುಟ್ಟ ಘಟಕಗಳ ಕಾರ್ಯಗಳೇ ಸಮಾಜವನ್ನು ಜೀವಂತವಾಗಿರಿಸುತ್ತವೆ. ವಿಪರ್ಯಾಸವೆಂದರೆ ಜನರು ಸಾಮಾನ್ಯವಾಗಿ ಸಮುದ್ರವನ್ನೇ ಗುರುತಿಸುತ್ತಾರೆಯೇ ವಿನಾ ನದಿ ತೊರೆಗಳನ್ನಲ್ಲ. ಎಲ್ಲರಿಗೂ ಸ್ಥೂಲವಾಗಿ ಕಾಣುವುದು, ದೊಡ್ಡದೆನಿಸಿಕೊಂಡದ್ದು ಮಾತ್ರ ನೆನಪಾಗುವುದು, ಆಪ್ತವಾಗುವುದು ಇಂದಿನ ದುರಂತ. ಆದರೆ ಸಂಸ್ಕೃತಿಗೆ ತೊಡಕುಗಳು ಬಂದಾಗ ಇಂತಹ ಘಟಕಗಳೇ ಸೆಟೆದು ನಿಂತು ಸೂಕ್ಷ್ಮ ರೂಪದಲ್ಲಿ ಹೋರಾಡುತ್ತವೆ. ಈ ನಿಟ್ಟಿನಲ್ಲಿ ನೂಪುರ ಭ್ರಮರಿಯದ್ದು ನಿಜಕ್ಕೂ ಅಂತಹ ಒಂದು ಅತ್ಯಪೂರ್ವ ಕೆಲಸ. ಸಾಹಿತ್ಯದ ಚಳುವಳಿಗಿಂತ ಉಳಿದ ಕಲಾಪ್ರಕಾರದ ಚಳುವಳಿಗೆ ಹೆಚ್ಚಿನ ಅವಕಾಶಗಳಿರುವ ಕಾಲಕ್ಕೆ ನೂಪುರ ಮಾಡುತ್ತಿರುವುದು ಆತ್ಮೀಯತೆಯ

ಕೆಲಸ. ವೈಭವಕ್ಕಿಂತಲೂ ಈ ಪತ್ರಿಕೆ ನೆಚ್ಚಿಕೊಂಡದ್ದು ನಿಧಾನವಾದರೂ ಪ್ರಧಾನವೆಂಬಂತ 'ನೀಟುಗಾರಿಕೆ'ಯ, ಅಚ್ಚುಕಟ್ಟುತನದ ಕೆಲಸವನ್ನು. ಇಂತಹ ಕೆಲಸ ಇಂದಿನ ಕಾಲಕ್ಕೆ ಅಗತ್ಯವಾಗಿ ಹೆಚ್ಚಾಗಬೇಕು. ಸಾಮಾಜಿಕ, ಸಾಹಿತ್ಯಿಕ ಕಾರ್ಯಗಳನ್ನು ಒಟ್ಟಿಗೆ ನಿಂತು ಮಾಡುವ ಕೆಲಸವೂ ನೂಪುರ ಭ್ರಮರಿಯಿಂದಾಗುತ್ತಿದ್ದು ಇದರ ಧ್ಯೇಯಕ್ಕೆ ಮತ್ತಷ್ಟು ಸಹಕಾರ ಸಿಗಲಿ ಎಂದು ಆಶಿಸಿದವರು ಡಾ. ಜಿ. ಬಿ. ಹರೀಶ್.

ನೂಪುರದ ಬಳಗದಿಂದ ಗುರು ಮುರಳೀಧರ ರಾವ್, ದಿವಾಕರ ಹೆಗಡೆ, ಧ್ಯೇಯ ಸಾಫ್ಟ್‌ವೇರ್ ಸೊಲ್ಯೂಷನ್ಸ್‌ನ ಮಹೇಶ್ ಎಳ್ಯಡ್ಕ, ಅವರನ್ನು ಸನ್ಮಾನಿಸಿ ಅಭಿವಂದಿಸಲಾಯಿತು. ಡಾ. ಪ್ರಧಾನ್ ಗುರುದತ್ ಮತ್ತು ದಿವಾಕರ ಹೆಗಡೆಯವರು ನೂಪುರದ ಧ್ಯೇಯೋದ್ದೇಶಗಳನ್ನು ಮನದುಂಬಿ ಶ್ಲಾಘಿಸಿದರು. ಸುನೀಲ್ ಕುಲಕರ್ಣಿ, ರಾಮ ಭಟ್ ಅವರ ಅನುಪಸ್ಥಿತಿ ಅವರಿತ್ತ ಸಹಕಾರವನ್ನು ಮತ್ತಷ್ಟು ಸ್ಮರಿಸಿತು. ಎಫ್‌ಎಂ ರೈನ್‌ಬೋ ನಿರೂಪಕಿ ರೇವತಿ ಶೆಟ್ಟಿಯವರ ಅಸ್ಖಲಿತ ನಿರೂಪಣೆ ಕಾರ್ಯಕ್ರಮದ ಔಪಚಾರಿಕತೆಯ ಬಿಗಿಯನ್ನು ಕಳಚಿ ಸ್ನೇಹಪೂರ್ವಕ ಸಮ್ಮಿಲನವಾಗಿಸಿತು. ದೂರದರ್ಶನ ಕಲಾವಿದೆ ವಿದುಷಿ ಶ್ರೀಮತಿ ಐಶ್ವರ್ಯಾ ನಿತ್ಯಾನಂದ ಅವರಿಂದ ಡಿ.ವಿ.ಜಿ. ಅಂತಃಪುರ ಗೀತೆಗಳ ಕುರಿತ ಸೊಗಸಾದ ಭರತನಾಟ್ಯ ನೆರೆದವರ ಕಣ್ಣಿಗೆ ಮತ್ತೊಂದು ಹಬ್ಬ.

ಸಾನ್ನಿಧ್ಯ ಪ್ರಕಾಶನದ ಅಧ್ಯಕ್ಷ ಬಿ.ಜಿ. ನಾರಾಯಣ ಭಟ್, ನೃತ್ಯ ಸಂಶೋಧಕಿ ಡಾ. ಶೋಭಾ ಶಶಿಕುಮಾರ್, ಅಂತರ್ರಾಷ್ಟ್ರೀಯ ಈ–ಕವಿ ಸಂಘಟನೆಯ ಅಧ್ಯಕ್ಷ ವಿ. ಎಂ. ಕುಮಾರಸ್ವಾಮಿ, ಹಿರಿಯ ಕಲಾವಿದೆ, ಬರಹಗಾರ್ತಿ ವೇದಪುಷ್ಪ, ಸಂಗೀತ ವಿದುಷಿ ಡಾ. ಅರ್ಚನಾ ಭಟ್, ಹವ್ಯಕ ಪತ್ರಿಕೆಯ ಸಂಪಾದಕ ಶ್ರೀಕಾಂತ ಹೆಗಡೆ, ಕರ್ನಾಟಕ ಸಾಂಸ್ಕೃತಿಕ ವೇದಿಕೆಯ ಪಂಜಾಜೆ ಸಹೋದರರು, ಅಂಕಣಕಾರ ರಾಕೇಶ್ ಕುಮಾರ್ ಕಮ್ಮಜೆ... ಹೀಗೆ ಕಾರ್ಯಕ್ರಮದ ಒಟ್ಟು ಅಂದಕ್ಕೆ ಮೆರುಗು ನೀಡಿದವರು ನೂರಾರು ಮಂದಿ. ಈ ಎಲ್ಲಾ ಹಂತದಲ್ಲಿ ನೂಪುರದ ಗೆಳೆಯಬಳಗ ಚೈತ್ರರಶ್ಮಿ ಸಂಪಾದಕ ರಾಮಚಂದ್ರ ಹೆಗಡೆ, ರಾಜೀವ ಹೆಗಡೆ, ಎನ್. ವಿ. ವೈದ್ಯ, ಮೇಧಾ ನಾಗರಾಜ್, ನಮ್ರತಾಪ್ರಸಾದ್, ಶ್ರೀನಿಧಿ ಅಡಿಗ, ಹರ್ಷ ಕಮ್ಮಜೆ, ಕಾರ್ತಿಕ್ ಪರಾಡ್ಕರ್.. ಅವರ ಸಹಕಾರ ಮರೆಯಲಸಾಧ್ಯ.

ಮೊದಲ ಹೆಜ್ಜೆ ಮಡಿಕೇರಿಯಲ್ಲಿ, ಎರಡನೇಯದು ಮಂಗಳೂರಿನಲ್ಲಿ, ಮೂರನೇಯದಕ್ಕೆ 'ಮುದ್ರಾರ್ಣವ'ದ ಮೇಘಮಲ್ಹಾರ ಉಜಿರೆಯಲ್ಲಿ, ನಾಲ್ಕನೇಯದಕ್ಕೆ ಬೆಂಗಳೂರಿನಲ್ಲಿ ಮಾರ್ಗ ಮುಕುರವಾಗಿ... ಮುಂದಿನದು? ನಿಮ್ಮ ನಿರಂತರ ಆಶೀರ್ವಾದ, ನಮ್ಮ ನಿರೀಕ್ಷೆ. ಒಟ್ಟಿನಲ್ಲಿ ಕರ್ತವ್ಯ ಜಾರಿಯಲ್ಲಿರಬೇಕು. ಕೈಜೋಡಿಸಿ ಮುಂದುವರಿಯಬೇಕು, ಫಲಾಫಲಗಳನ್ನು ಅನಂತಕ್ಕೆ ಬಿಟ್ಟು, ಧ್ಯೇಯವೊಂದನ್ನೇ ಜೊತೆಗಿಟ್ಟು.

ನಮ್ಮೊಂದಿಗೆ ಇರುತ್ತೀರಲ್ವಾ?

ಒರತೆ ನದಿಯಾಗುತ್ತಲಿದೆ... ಕನಸುಗಳು ಹಲವಿವೆ, ಹಿರಿದಿವೆ... ಗುರಿಯೆಡೆಗಿನ ಪಯಣ ನಿರಂತರ..

**ಪ್ರೀತಿಯಿಂದ**
**ಸಂಪಾದಕರು**

# ಲಲಿತ ಲಹರಿ

# ಅಷ್ಟನಾಯಿಕಾ ಚಿತ್ತವೃತ್ತಿ

## ವಾಸಕಸಜ್ಜಿಕಾ ನಾಯಿಕೆ

***(ಕಳೆದ ಸಂಚಿಕೆಯಿಂದ ಮುಂದುವರೆದುದು...)***

**ತ**ನ್ನನ್ನು ಮತ್ತು ತನ್ನ ಕೋಣೆಯನ್ನು ಆಸ್ಥೆಯಿಂದ ಸಿಂಗರಿಸಿಕೊಂಡು ಪ್ರಿಯಕರ/ನಾಯಕನ ಬರುವಿಕೆಗಾಗಿ ನಿರೀಕ್ಷೆ ಹೊಂದಿ ಸಿದ್ಧವಾಗಿರುವವಳೇ ವಾಸಕಸಜ್ಜಿಕೆ. ನಾಯಕನೊಂದಿಗೆ ಸಂಗಸುಖದ ಕನಸು ಕಾಣುತ್ತಾ, ಭವಿಷ್ಯವನ್ನು ನೆನೆದು ಸಂತಸ ಹೊಂದುವವಳು; ಆಗಾಗ್ಗೆ ನಾಯಕನ ದಾರಿ ನೋಡುತ್ತಾ ಊಟೋಪಚಾರದ ವ್ಯವಸ್ಥೆಯಲ್ಲಿ ತೊಡಗಿಸಿಕೊಂಡು ತನ್ನ ನಿರೀಕ್ಷೆಯನ್ನು ಹಲವು ಮಾದರಿಗಳಲ್ಲಿ ವ್ಯಕ್ತಪಡಿಸುತ್ತಾಳೆ. ಸಖಿಯರೊಡನೆ ಆತನ ಬರುವಿಕೆಯ ಕುರಿತಂತೆ ಕೇಳುತ್ತಾ, ಆತನ ಬಗ್ಗೆಯೇ ಪ್ರಿಯ ಮಾತನ್ನಾಡುವವಳಾದ ಈಕೆ ; ಉತ್ಸಾಹಿತಳಾಗಿರುತ್ತಾಳೆ.


ಈ ನಾಯಿಕೆಯಲ್ಲೂ ಉತ್ತಮ, ಮಧ್ಯಮ, ಅಧಮ ಅಥವಾ ಸ್ವೀಯಾ, ಪರಕೀಯ, ಸಾಮಾನ್ಯವೆಂಬ ಬೇಧಗಳಿದ್ದು ಅದು ಈಕೆಯ ಅವಸ್ಥೆಗಳನ್ನು ಅವಲಂಬಿಸಿರುತ್ತದೆ. ಸಹಜವಾಗಿ ಉತ್ತಮ ನಾಯಿಕೆಯದ್ದು ಹೆಚ್ಚೇನೂ ಅಭಿನಯಕ್ಕೆ ಅವಕಾಶ ನೀಡದ ಆದರೆ; ಉನ್ನತ ಮಟ್ಟದ, ಗಂಭೀರ, ಮೃದು ವರ್ತನೆಯುಳ್ಳ ಭಾವಪ್ರಕಾಶ. ಮಧ್ಯಮವು ಮನುಷ್ಯ ಸಹಜ ಮಿಶ್ರ ಭಾವನೆಗಳ ಪ್ರತಿರೂಪ. ಅಧಮನಾಯಿಕೆಯು ನೀಚ ಇಲ್ಲವೇ ಭಾವನೆಯನ್ನು ಹಿಡಿತವಿರಿಸದೆ ಯಥಾಸ್ಥಿತಿಯಲ್ಲಿ ಹರಿಬಿಡುವ, ಅಥವಾ ಗೌರವಯುತ ನಡವಳಿಕೆಗಳ ಬದಲಾಗಿ ಎಂದಿನಂತೆಯೇ ಇದ್ದು ; ಅನೌಚಿತ್ಯಕರವಾಗಿ ಕಾಣಿಸಿಕೊಳ್ಳುವವಳು.

ಸ್ವೀಯಾ ಅಂದರೆ ಪತಿಗೆ ನಿಷ್ಠಳಾದ ಪತ್ನಿ. ಪರಕೀಯಳು ಪತಿಯ ಹೊರತಾಗಿಯೂ ಇನ್ನೊಬ್ಬರಲ್ಲಿ ಅನುರಾಗ ಹೊಂದಿರುವವಳು, ಸಾಮಾನ್ಯೆಯು ವೇಶ್ಯೆಯೇ ಆಗಿರುತ್ತಾಳೆ. ಇಷ್ಟೇ ಅಲ್ಲದೆ ಅಷ್ಟವಿಧ ನಾಯಿಕೆಯರು ಮುಗ್ಧಾ, ಮಧ್ಯಾ ಮತ್ತು ಪ್ರಗಲ್ಭ ಸ್ಥಿತಿಯ ಪೈಕಿ ಯಾವುದಾದರೂ ಒಂದು ವರ್ಗಕ್ಕೆ ಸೇರಿರುವುದೂ ಇದೆ. ಮುಗ್ಧಾ ನಾಯಿಕೆಯು ಮುಗ್ಧೆ, ಬಾಲ್ಯ ಯೌವನಗಳ ಸಂಧಿಕಾಲದಲ್ಲಿರುವವಳು. ಲಜ್ಜೆಯ ವರ್ತನೆ, ಅನುರಾಗದ ಕುರಿತಾಗಿ ಅಷ್ಟೇನೂ ಅರಿವಿಲ್ಲದ ಮೃದು ಸ್ವಭಾವದವಳಾಗಿರುತ್ತಾಳೆ. ಆಕೆಗೆ ಎಲ್ಲವೂ ಹೊಸತು, ಮೊದಲು. ಮಧ್ಯಾ ನಾಯಿಕೆಯು ಮುಗ್ಧಾಳಿಗಿಂತ ಕೊಂಚ ಹೆಚ್ಚಾದ ಅರಿವಿರುವ

ಯೌವನಾವಸ್ಥೆ ವ್ಯಾಪಿಸಿರುವವಳು. ಹೆಚ್ಚು ಲಜ್ಜೆ ಮತ್ತು ಕಾಮವಿಕಾರವುಳ್ಳ ಈಕೆಯದ್ದು ಚಾತುರ್ಯಭರಿತ ವರ್ತನೆ. ಪ್ರಗಲ್ಭೆಗೆ ಕಾಮಾಸಕ್ತಿ ಹೆಚ್ಚು, ರತಿಕ್ರೀಡೆಗಳಲ್ಲಿ ಪ್ರವೀಣಳು. ಲಜ್ಜೆ ಅತೀಕಡಿಮೆ.

ಪ್ರಸ್ತುತ ಕಾವ್ಯ ಮತ್ತು ಭಾವಾಭಿವ್ಯಕ್ತಿಯಲ್ಲಿ ನೀಡಲಾಗಿರುವ ನಾಯಿಕೆಯು ಮಧ್ಯಮ ಗುಣವುಳ್ಳ; ಸ್ವೀಯಾ, ಮಧ್ಯಾ ಸ್ವಭಾವವುಳ್ಳವಳಾಗಿದ್ದು; ಇವು ನರ್ತನದಲ್ಲಿ ಅಭಿನಯಕ್ಕೆ ಹೆಚ್ಚು ವಿಸ್ತಾರವನ್ನು ಕಲ್ಪಿಸಿಕೊಡುವ ಮತ್ತು ಮಾದರಿಯ ಜೀವನದ ಆಯಾಮವಿರುವುದರಿಂದ; ಈ ಅಷ್ಟನಾಯಿಕಾ ಚಿತ್ತವೃತ್ತಿಯ ಹಾದಿಯಲ್ಲಿ ಮಧ್ಯಮನಾಯಿಕೆಯನ್ನೇ ಪ್ರಧಾನವಾಗಿ ಎಲ್ಲಾ ನಾಯಿಕೆಯರಿಗೂ ಅಳವಡಿಸಿ ಸಾಹಿತ್ಯವನ್ನು ನೀಡಲಾಗಿದೆ. ದಿವಾಕರ ಹೆಗಡೆಯವರ ಕವಿತ್ವವು ಭೂಮಿ, ಪ್ರಕೃತಿ, ಮಳೆ, ಬಾನು ಇತ್ಯಾದಿ ಪ್ರಾಕೃತಿಕವಾಗಿ ನಿರೂಪಿಸಲ್ಪಟ್ಟ ಸೆಲೆಯನ್ನು ಹೊಂದಿದೆ. ಬನ್ನಿ, ನಮ್ಮ ಕಲ್ಪನಾ ಸಾಮರ್ಥ್ಯ, ಅನುಭವ–ಅನುಭಾವ, ವಿಶ್ಲೇಷಣೆ, ನಾಟ್ಯದ ಆಯಾಮ, ಸವಾಲು–ಸಾಧನ, ಅಭಿವ್ಯಕ್ತಿಯ ಕ್ಷಿತಿಜ, ರಸದೃಷ್ಟಿ, ಕಾವ್ಯದೃಷ್ಟಿ ಮತ್ತು ಅರಿವಿನ ಹರಹುವಿನ ವಿಸ್ತಾರದಲ್ಲಿ ಕೈಜೋಡಿಸೋಣ.

ಅಂದಹಾಗೆ ಮಂಟಪ ಉಪಾಧ್ಯರ ಕಲಾಭಿವ್ಯಕ್ತಿಯನ್ನು ಕಂಡ ಕೂಚಿಪುಡಿಯ ನಡೆದಾಡುವ ದಂತಕತೆ  ವೇದಾಂತಂ ಸತ್ಯನಾರಾಯಣ ಶರ್ಮ ಅವರು ಆನಂದತುಂದಿಲರಾಗಿ ಕೂಚಿಪುಡಿ ಗ್ರಾಮದಲ್ಲಿ 108 ಚಿನ್ನದ ಹೂಗಳ ಕನಕಾಭಿಷೇಕವನ್ನು ನೆರವೇರಿಸಿದ್ದು ಅಭಿವ್ಯಕ್ತಿಯ ಧನ್ಯತೆಗೆ ಸಾಕ್ಷಿಯಾದ ಸುದ್ದಿ. ಇಂತಹ ಕಲಾಭಿವಕ್ತಿಯ ತವರು ಕರ್ನಾಟಕ ಮತ್ತು ಅಂತಹ ಅತ್ಯಪೂರ್ವ ರಾಜ ವೈಭೋಗದ ಸಂಪ್ರದಾಯವನ್ನು ಉಳಿಸಿ ಬೆಳೆಸುತ್ತಾ ಬಂದಿರುವ ಸಂಸ್ಕೃತಿ ಮತ್ತಷ್ಟು ಎಲ್ಲೆಡೆ ಬೆಳಗಲಿ. ಸಂತತಿ ಸಾವಿರವಾಗಲಿ.



## ಭಾಮಿನೀ

**ಶತಾವಧಾನಿ  ಡಾ. ಆರ್. ಗಣೇಶ್**

**ರಾಗ : ಅಭೇರಿ ; ಭೋಗಷಟ್ಪದಿ**

ದಿನದ ಬೇಗೆ ತಗ್ಗುತಿರಲು ಮನದ ಮಥನವಿಳಿಯುತಿರಲು
ಅನುಪಮಶುಭಶಕುನದಿಂದ ಭರವಸೆಗೊಳುತೆ
ಮನೆಯನೆಲ್ಲ ನೇರ್ಪಗೊಳಿಸಿ ತನುವನೆಲ್ಲ ತಣಿಸಿ ಕುಣಿಸಿ
ಇನನು ಬರುವನೆಂದೆಣಿಪಳು ವಾಸಕಸಜ್ಜೆ

**(ಶುಭ ಶಕುನಗಳಿಂದ ಅಂದೇ ಆತನು ಬರುವನೆಂದು ಊಹಿಸಿ ಸಂಭ್ರಮದಿಂದ ಮನೆಯನು ಓರಣಗೈದು ಸಿಂಗರಿಸಿಕೊಂಡು ಅಣಿಯಾಗಿ ನಲ್ಲನ ಹಾದಿನೋಡುವಳು.)**

**ರಾಗ : ಯಮುನಾ ಕಲ್ಯಾಣಿ– ಏಕ ತಾಳ,**
**ತ್ರಿಪುಟತಾಳ, ಅಷ್ಟತಾಳ**

ಬರಲಿಹೆ ನೀನೆನುವಾಸೆಯಿಂದಲೆ
ನ್ನುರದೊಳು ನಂದನವಿಂದು ಸಂದಿದೆ ।
ಎಂತಸಾರ ಮದೀಯಜೀವನ
ಕಾಂತ ನೀ ಬರದಿರಲು ಮೋಹನ ॥ಪ॥

ಸಿಂಗರಕೆಂದಣಿಯಾಗಲು ನಾ ಸ್ಮರ
ಸಂಗರ ! ನೀ ಬಂದವೊಲೆನಗಾದುದು ।
ಮಂಗಳಾಂಗಿ ಸಖಿ ಸುಳಿದಿರಲೀ ಕಡೆ
ಕಂಗಳ ತೋರಣ ಕದದೆಡೆ ಕೋದುದು ॥

ಸಜ್ಜೆಯ ಸವರಿಸಿ ಸಜ್ಜಾಗಿಸುತಿರೆ
ಲಜ್ಜೆಯದನು ಸುಳಿಸುತ್ತುವುದು ।
ಹಜ್ಜೆ ನಿನ್ನದೆಂಬಂತೀ ಪ್ರಕೃತಿಯೇ
ಬಿಜ್ಜೆಯ ತೋರಿದೆ ಕೈತವದಾ ॥

ದಯಿತ! ನೀನು ದಯಮಾಡಿಸೀಗಲೇ
ನಯವಿದ! ನಯವಿದನರಿಯಲಾರೆಯಾ ?
ಜಯವನು ಕರುಣಿಸೆ ಬಿಜಯಮಾಡೆಯಾ ?
ಸ್ಮಯವ ಸಡಲಿಸಿ ಸುಖಿಯಾಗಿಸೆಯಾ? ॥





## ಮೇಘಮೇದಿನಿ

**– ದಿವಾಕರ ಹೆಗಡೆ,** ಧಾರವಾಡ

ಹೇಮಂತನ ಶ್ರೀಮಂತಿಕೆ ಕಾಂತೆಯ ಮನ ಕಾಡಿದೆ ।
ಕಾಮರೂಪ ಮೇಘಮಾರ ಬರುವಾಸೆಯು ಮೂಡಿದೆ ।
ತೆನೆ ವಕ್ಷಕೆ ತೊನೆದಾಡುವ ಮುಂಭಾರದ ಬೆಡಗೆ ।
ಗೊನೆಬಾಳೆಯ ನಿಡುಜಘನದ ಹಿಂಭಾರದ ಹೊರಳೆ ॥
ಹನ ಮಂಜಿನ ಶೀತ ಸೋನೆ ತಂಗಾಳಿಯ ಉಡುಗೆ ।
ಕನಸಾಯಿತು ಕಾಯದಿಚ್ಛೆ ಬೆಳುದಿಂಗಳ ತೊಡುಗೆ ॥

ಶಿಶಿರೋದಯದಲಿ ಹೊಸಕನಸಿನ ಹದ
ವಸುಮತಿ ತಾನೆಸೆದಳು ಮುದದಿ ।
ವಸನಾಪ್ಯಾಯನ ಕುಸುರಿನ ರೇಶಿಮೆ
ರಸೆ ರಾಣಿಯು ತಾ ಸಮ್ಮುದದಿ ॥

ಬೆಸೆವಳು ಮಲ್ಲಿಗೆಯನು ಹೊಂದಿಸುವಳು ಜಾಜಿಯ ।
ಸಸಿವಳು ಜಡೆಜಡಕನು ನೊಸಲೆಡೆಯಲಿ ಕುಂಕುಮ ।
ತೊಡುವಳು ಆಭರಣವ ವೈಯ್ಯಾರದಿ ನಡೆವಳು ।
ತಡೆವಳು, ದರ್ಪಣವನು ಹಿಡಿದಲೆವಳು, ನಗುವಳು ।
ಸುಡುವಳು ವಿರಹದುರಿಗೆ, ತಾನಿಟ್ಟುಸಿರಿಡುವಳು ।
ಬಿಡುವಳು ಅನ್ನವ, ಪಿರಿದಾತನ ನೆನಪಿಸುವಳು ।

# ಭಾಮಿನಿಯ ಭಾವಾಭಿವ್ಯಕ್ತಿ

**– ಮಂಟಪ ಪ್ರಭಾಕರ ಉಪಾಧ್ಯ**

ಪ್ರಕೃತಿಯ ಸಹಜಲಯಕ್ಕೆ ಹೊಂದಿಕೊಳ್ಳಲಾರದೆ, ಕೆಲಸ ಮಾಡಲು ಇಷ್ಟವಿಲ್ಲದೆ ನಿರುತ್ಸಾಹದಿಂದ ಉಯ್ಯಾಲೆಯಲ್ಲಿ ಕುಳಿತೆ. ಕಾಲನ್ನು ನೆಲದಿಂದ ಚಿಮ್ಮಿಸಿ ಹಾಗೆಯೇ ತೂಗಾಡುತ್ತಲೇ ಇದ್ದೆ. ನಿಧಾನವಾಗಿ ಉಯ್ಯಾಲೆಯ ಗತಿಗೆ ನನ್ನ ಮನದ ಉದ್ವೇಗಗಳೆಲ್ಲಾ ಕಡಿಮೆ ಆಗುತ್ತಾ ಹೊಂದಿಕೊಂಡೆ. ಒಮ್ಮೆಲೇ ರಭಸದ ಮಳೆ ನಿಂತು ಹನಿಹನಿಯಾಗಿ ತೊಟ್ಟಿಕ್ಕುವಂತೆ ನನ್ನ ಯೋಚನೆಗಳ ಪ್ರವಾಹ ನಿಂತು ಉಯ್ಯಾಲೆಯ ಚರ್ ಚರ್ ಎಂಬ ಶಬ್ದದಲ್ಲಿ ಕೇಂದ್ರವಾಯ್ತು. ಉಯ್ಯಾಲೆಯ ಹಗ್ಗ ಹಿಡಿದು ಕೈಯ ಮೇಲೆ ತಲೆ ಇಟ್ಟು ಒರಗಿ ಶೂನ್ಯದತ್ತ ನೋಡುತ್ತಾ ಅದೆಷ್ಟು ಹೊತ್ತು ಇದ್ದೆನೋ ತಿಳಿಯದು. ಇದ್ದಕ್ಕಿದ್ದಂತೆ ಎಡಗಣ್ಣು ಅದುರಿತು. ಎಡಗೈತೋಳು ಅದುರಿತು. ಒಮ್ಮೆಲೇ ಎಚ್ಚರಗೊಂಡೆ. ನನಗಾದ ಅನುಭವದ ಸತ್ಯತೆಗೆ ಕಾದೆ. ಹೌದು; ಪುನಃ ಹಾಗೆಯೇ ಆಯ್ತು. ಯಾಕೆ ಹೀಗೆ? ಮೇಲಿಂದ ಮೇಲೆ ಹೀಗೆ? ಹೋ ! ಅಮ್ಮ ಹೇಳುತ್ತಿರುವ ಮಾತು ನೆನಪಾಯ್ತು. ಹೆಣ್ಣಿಗೆ ಎಡಬದಿಯ ಶಕುನಗಳು ಶುಭದಾಯಕ ಎಂದು. ನನಗ್ಯಾವ ಕರ್ಮದ ಶುಭ ? ನೀರಸಳಾಗಿ ಕುಳಿತೆ.

ಆದರೆ ನಂಬಿಕೆಗಳೆಲ್ಲಾ ಹುಸಿಯಾದಾಗ ನನ್ನ ಪಾಲಿಗೆ ಶಕುನವೂ ಅನಿವಾರ್ಯ ಎಂದೆನಿಸಿತು. ಬೆಳಗಿನಿಂದ ನಿರೀಕ್ಷೆಯಲ್ಲಿರುವ ನನ್ನ ಪತಿಯ ಬರವೇ ಶಕುನದಂತೆ ಕಂಡಿತು. ಹತ್ತಾರು ಬಾರಿ ಯೋಚಿಸಿದೆ. ನಂಬಿಕೆ ಜಾಗೃತವಾಗಿ ಪ್ರೀತಿಯು ಮತ್ತೊಮ್ಮೆ ನನ್ನವನಲ್ಲಿ ನೆಟ್ಟಿತು, ಚಿಗುರಿತು, ಅರಳಿತು, ಮನವು ಮತ್ತೆ ಓಲಾಡಿತು. ಸಂಭ್ರಮದ ಆವೇಶದಿಂದ ಉಯ್ಯಾಲೆಯಿಂದ ಜಿಗಿದೆ. ಕುಣಿದೆ. ಹಾರಿದೆ; ಪ್ರಪಂಚ ನನಗಾಗಿ ಕಾದಿದೆ ಎನಿಸಿತು. ಅತ್ತ ಇತ್ತ ಅರ್ಥವಿಲ್ಲದೆ, ಕಾರಣ ಇಲ್ಲದೆ ನಲಿದೆ. ನನಗೊಬ್ಬಳಿಗೇ ಜೀವ ಇದೆ ಎನಿಸಿತು. ಪ್ರಪಂಚದ ಎಲ್ಲ ಆಗುಹೋಗುಗಳು ಜಡವಾಗಿ ಕಂಡವು. ಎಲ್ಲವೂ ಮಂದಲಯದಲ್ಲಿದ್ದಂತೆ ಕಂಡಿತು.

ಎಲ್ಲಕ್ಕಿಂತ ನನ್ನ ಮನೆಯೇ ಸತ್ತಿದೆ ಎನ್ನಿಸಿತು. ಅಂಗಳದಲ್ಲಿ ತರಗೆಲೆಗಳ ರಾಶಿ. ಅವಸರ ಅವಸರವಾಗಿ ಗುಡಿಸಿದೆ. ಬಿಂದಿಗೆಯ ನೀರಿನಿಂದ ಅಂಗಳವನ್ನು ಸೆಗಣಿಸಾರಿಸಿ ಒಪ್ಪ ಮಾಡಿದೆ. ಯಾವತ್ತೂ ಇಲ್ಲದ ಲವಲವಿಕೆ. ಹತ್ತಾರು ದಿನದ ಎಲ್ಲಾ ಕೆಲಸಗಳನ್ನು ಹತ್ತಾರು ಕ್ಷಣಗಳಲ್ಲೇ ಮಾಡಿ ಮುಗಿಸಿದೆ. ಎಲ್ಲಾ ಕೆಲಸಗಳಲ್ಲೂ ಆತನ ಮಂದಹಾಸ ಪ್ರೇರಣೆ ನೀಡುತ್ತಿತ್ತು. ಆತನನ್ನು ಅದ್ದೂರಿಯಾಗಿ ಸ್ವಾಗತಿಸಬೇಕೆಂದು ಆತ ಗಾಡಿ ಇಳಿಯುವ ಸ್ಥಳಕ್ಕೆ ಬಂದು ಮನೆಯ ಅಲಂಕಾರ ನೋಡಿದೆ. ಮಲ್ಲಿಗೆಯ ಹೂಗಳು ನನ್ನ ತಲೆಯ ಮೇಲೆ ಉದುರಿದಾಗ ನನಗೆ ಹೀಗನ್ನಿಸಿತು : ನಾವೂ ನಿನಗೆ ಸಹಾಯ ಮಾಡುವೆವು ಎಂದು ತಿಳಿಸಲು ಅರಳಿ ತಮ್ಮ ಸಂತೋಷ ತಿಳಿಸುತ್ತಿದ್ದವು. ಹೂಗಳನ್ನೆಲ್ಲಾ ಕುಯ್ದು ಮಾಲೆ ಮಾಡಿದೆ. ಒತ್ತೊತ್ತಾಗಿ ಮಾಡಿದ ಮಾಲೆಯ ಕಂಪಿನಿಂದ ಇನ್ನಷ್ಟು ಉನ್ಮತ್ತೆಯಾದೆ.

ಇನ್ನೇನು ಆತ ಗಾಡಿ ಇಳಿಯುವ ದೃಶ್ಯವನ್ನು ಎಣಿಸಿಕೊಂಡೇ ಮುಖವನ್ನು ಏರಿಸಲಾರದೆ ತಲೆತಗ್ಗಿಸಿ ಕಾಲನ್ನು ಗೀರುತ್ತಿದ್ದೆ. ಏನೋ ಶೂನ್ಯತೆ ನನ್ನನ್ನು ಎಚ್ಚರಿಸಿತು. ಆತ ಇಳಿಯುವಲ್ಲಿಂದ ರಂಗವಲಿಯ ಚಿತ್ತಾರಗಳನ್ನು

ಮೂಡಿಸಿದೆ. ರಂಗವಲ್ಲಿಯನ್ನಿಡುವಾಗ ನನ್ನ ಲೋಕವೇ ಬೇರೆ. ಒಂದೊಂದೇ ಬಿಂದುಗಳನ್ನು ಇಡುವಾಗ ಆತನದ್ದೇ ಯೋಚನೆ. ಎಷ್ಟೆಂದರೆ ಒಂದೇ ಸ್ಥಳದಲ್ಲಿ ಬಿಂದುಗಳ ರಾಶಿ. ರಂಗವಲ್ಲಿಯ ಬಿಂದುಗಳು ನನ್ನ ತಲೆಯಂತೆಯೇ ಅಳತೆ ತಪ್ಪಿ ಬಿದ್ದಿದ್ದುವು. 'ಯಾರಾದರೂ ನನ್ನನ್ನು ನೋಡಿದರೆ...' ಎಂದು ಆಚೆ ಈಚೆ ನೋಡಿದೆ. ಸದ್ಯ ಯಾರೂ ಗಮನಿಸಲಿಲ್ಲ. ಜಾಗ್ರತಳಾಗಿ ರಂಗವಲ್ಲಿಯ ಬಿಂದುಗಳನ್ನು ಸೇರಿಸಲು ಮುಂದಾದೆ. ಒಂದೊಂದು ಬಿಂದುವನ್ನು ಸೇರಿಸುವಾಗಲೂ ಆತನ ಸಮಾಗಮದ ನೆನಪುಗಳಾಗಿ ರಂಗವಲ್ಲಿಯ ಶೋಭೆಗೆ ನನ್ನಿಂದ ಜೀವ ನೀಡಲಾಗುತ್ತಿಲ್ಲವಾಗಿತ್ತು. ಅಂತೂ ಆತ ಎಲ್ಲಿಂದ ನಡೆದು ಬಂದರೂ ನಾನು ಬರೆದ ರಂಗವಲ್ಲಿಯನ್ನು ಮೆಟ್ಟಿಯೇ ಬರುವಂತೆ ಚಿತ್ರಿಸಿದೆ. ಮಾಡಿದ ಮಲ್ಲಿಗೆಯ ಮಾಲೆಯನ್ನು ಅಳತೆಸರಿಪಡಿಸಿಕೊಂಡು ಹಾರವಾಗಿ ಮಾಡಿ ಸಿದ್ಧವಾಗಿಟ್ಟೆ. ಹಾಗೆಯೇ ಹೂಮಾಲೆಯನ್ನು ಸ್ಪರ್ಶಿಸುವಾಗ ಆತ ಹೇಳಿದ ಮಾತು ನೆನಪಾಯ್ತು. 'ಮುತ್ತಿನ ಮಾಲೆ' ! ಮುತ್ತಿನಮಾಲೆಯನ್ನು ತರುವೆ ಎಂದು ಮುತ್ತುಗಳನ್ನೇ ನೀಡಿದ ಆ ಅನುಭವ ! ಛೇ ! ಹೇಳಲಾರೆ ! ಕರಗಿ ನೀರಾದ ನಾನು ಅಲ್ಲಿ ನಿಲ್ಲಲಾರದೆ ಮನೆಯೊಳಗೆ ಓಡಿಬಂದೆ.

ಮನೆಯನ್ನೆಲ್ಲಾ ಓರಣವಾಗಿಟ್ಟೆ. ಎಲ್ಲಾ ಸರಿ, ಶೃಂಗಾರ ದೇಗುಲವಾಗಿರಿಸಿದ ನನ್ನ ಮನೆಯನ್ನೇ ನಾನು ಕಸವಾಗಿ ಕಂಡಿದ್ದೆ. ಅದಕ್ಕೂ ತಡಮಾಡಲಿಲ್ಲ. ಕೆದರಿದ ತಲೆಗೂದಲನ್ನು ಬಾಚಿ ಹೆಣೆದು ಜಡೆಯನ್ನು ಹಾಕಿಕೊಂಡೆ. ಮುಖ ತೊಳೆದು ಶುಭ್ರಳಾದೆ. ಕಣ್ಣಿಗೆ ಕಪ್ಪಿಟ್ಟು ಹಣೆಗೆ ಘಮಘಮಿಸುವ ತಿಲಕವನ್ನಿಟ್ಟುಕೊಂಡೆ. ಕೈಗಳಿಗೆ ಹೆಚ್ಚಾಗಿಯೇ ಬಳೆಗಳನ್ನು ಸುರಿದುಕೊಂಡೆ. ಇದುವರೆಗೆ ಕಿರಿಕಿರಿ ಎನಿಸಿ ತೆಗೆದಿರಿಸಿದ ಕಾಲ್ಗೆಜ್ಜೆಗಳನ್ನು ತೊಟ್ಟು ಜಿಗಿಯುವಂತಾದೆ. ಇನ್ನು ಆಭರಣಗಳೇ ಸ್ವಲ್ಪ ಗೊಂದಲವಾಯ್ತು. ಯಾವುದನ್ನು ಉಪಯೋಗಿಸಬೇಕೆಂಬುದನ್ನೇ ಯೋಚಿಸಲಾರದೆ, ನಿರ್ಧರಿಸಲಾರದೆ ಕೈಗೆ ಸಿಕ್ಕಿದ್ದನ್ನು ಧರಿಸಿದೆ. ಆವಾಗಲೇ ನಾನು ಸುಂದರಿಯೂ ಇದ್ದೇನೆ ಎಂಬ ಖಾತ್ರಿ ಆಗಿತ್ತು.

ಕೈಗಳಿಗೆ ಚಿತ್ತಾರಗಳನ್ನು ಹಾಕಿಕೊಳ್ಳುವಷ್ಟು ಪುರುಸೊತ್ತು, ತಾಳ್ಮೆ ಎರಡೂ ಇಲ್ಲವಾಗಿತ್ತು. ಮಲ್ಲಿಗೆಯ ಮಾಲೆ ತಲೆ ಸೇರಿತು. ಎಲ್ಲವನ್ನೂ ಮುಗಿಸಿದಾಗ ನನ್ನ ಹೊಳಪಿನ ಮುಖವನ್ನೊಮ್ಮೆ ಅವಲೋಕಿಸಿದೆ. ನನ್ನ ಕಾಂತಿಯ ಪ್ರತಿಫಲನ ಕನ್ನಡಿಯಲ್ಲಿ ಅಷ್ಟಾಗಿ ಕಾಣಿಸಲಿಲ್ಲ. ಯಾಕೆ? ಹೌದು. ನಾಲ್ಕಾರು ದಿನಗಳಿಂದ ಅಲಂಕರಿಸಿಕೊಳ್ಳದೆ ಕನ್ನಡಿ ತನ್ನ ಕರ್ತವ್ಯದಿಂದ ಮರೆಯಾಗಿತ್ತು. ಅಲ್ಲ, ನಾನೇ ಅದಕ್ಕೆ ರಜೆ ನೀಡಿ ಧೂಳುಗಳಿಗೆ ವಿಶ್ರಾಂತಿಯ ನೆಲೆಯಾಗಿಸಿದ್ದೆ. ತತ್‌ಕ್ಷಣ ನನ್ನ ತಪ್ಪಿಗೆ ನಾನೇ ನನ್ನ ಸೆರಗಿನಿಂದ ಒರೆಸಿದೆ. ಸೆರಗೆಲ್ಲಾ ಧೂಳು. ಅಲ್ಲ, 'ಸೀರೆಯನ್ನೇ ಬದಲಿಸು' ಎಂದು ದರ್ಪಣಸುಂದರಿಗೆ ಜ್ಞಾನೋದಯ ಆಯ್ತು. ಕವಾಟಿನಲ್ಲಿನ ಸೀರೆಯ ಅಟ್ಟಿಗೆಯನ್ನು ಅವಲೋಕಿಸಿದೆ. 'ಯಾವುದನ್ನು ಧರಿಸಲಿ?' ಎಂದು ಯೋಚಿಸಿದೆ. ಹೊಸದಾಗಿ ತಂದಿರುವ ರೇಶ್ಮೆ ಸೀರೆ ಸೆಳೆದೆ; ಸುತ್ತಿಕೊಂಡು ನೋಡಿದೆ. ದಪ್ಪವಾಗಿ ಕಂಡೆ; ಅಲ್ಲೇ ಬಿಟ್ಟೆ. ತೆಳ್ಳಗಾದ ಪಾರದರ್ಶಕ ಸೀರೆಯನ್ನು ನಯವಾಗಿ ಧರಿಸಿದೆ. ಧರಿಸುತ್ತಲೇ ಪೀಚಾಗಿ ಕಂಡೆ. ಸೊರಗಿದ ನನ್ನ ಮುಖ ಎದ್ದು ಕಾಣುತ್ತಿತ್ತು. ಯಾವ ಸೀರೆಯೂ ನನ್ನನ್ನು ತೃಪ್ತಿಪಡಿಸಲಿಲ್ಲ. ಇಲ್ಲ, ನನಗಾಗಿ ಸೀರೆಗಿಂತಲೂ ನನ್ನವರಿಗಾಗಿ ಸೀರೆ ಉಡಬೇಕೆಂದು ಯೋಚಿಸಿದೆ.

ಹಾಂ ! ಅಂದು ಮದುವೆಯ ದಿನ ಮದುವಣಗಿತ್ತಿಯಾಗಿ ತಲೆತಗ್ಗಿಸಿ ನಿಂತಾಗ ಓರೆನೋಟದಿಂದ ನನ್ನ ಸೀರೆಯನ್ನು ಮೆಚ್ಚುವಂತೆ ನಟಿಸಿ ಒಳದೃಷ್ಟಿಯಲ್ಲಿ ನನ್ನನ್ನು ಮೆಚ್ಚಿದ್ದರು. ಇಂದೂ ನನ್ನನ್ನು ಮೆಚ್ಚಲು,

ಮೆಚ್ಚಿಸಲು ಅದೇ ಧಾರೆಸೀರೆಯನ್ನೇ ಉಡುತ್ತೇನೆ ಎಂದು ತೆಗೆದೆ. ಅದರ ಮೆಲೆ ಕೈಯಾಡಿಸಿದಾಗ ನನ್ನ ಚಿತ್ತದಲ್ಲಿ ಹೊಸ ಹೊಸ ಸಂಭ್ರಮಗಳು. ಹಳೆಯ ಶೃಂಗಾರದ ಬೆಸುಗೆಯೊಂದಿಗೆ ನವವಧುವಿನಂತೆ ಅಲಂಕೃತಳಾಗಿ, ಮೌನಿಯಾಗಿ, ಭಾವನಾಪ್ರಪಂಚದಲ್ಲಿ ಮೋಹಪರವಶಳಾಗಿ, ತ್ರಿಭಂಗಿಯಲ್ಲಿ, ಮುಖದ ಮೇಲೆ ಕಚಗುಳಿ ಇಡುತ್ತಿರುವ ಮುಂಗುರಳನ್ನು ಸವರುತ್ತಾ ನಲಿಯುತ್ತಿದ್ದೆ.

ಉತ್ಸಾಹದಿಂದ ಮಾಡಿಕೊಂಡ ಶೃಂಗಾರಕ್ಕೆ ಎಣೆ ಇಲ್ಲದಾಯ್ತು. ಮುಖದ ಅಲಂಕಾರಕ್ಕಂತೂ ಸ್ಥಳವೇ ಇಲ್ಲದಾಯ್ತು. ಕನ್ನಡಿಯನ್ನು ಒಮ್ಮೆ ನೋಡಿದೆ. ನನ್ನನ್ನು ರಮಿಸುವಾಗಲೆಲ್ಲಾ ನನ್ನ ಪತಿ ನನ್ನನ್ನು ರತಿ ಎನ್ನುತ್ತಿದ್ದ. ಆಗ ನಾನು ನನಗಾದ ಆನಂದವನ್ನು ಪ್ರಕಟಿಸದೆ ಮನದೊಳಗೇ ಅದರ ಆನಂದ ಪಡೆಯುತ್ತಿದ್ದೆ. ನಿಜ ಹೇಳಬೇಕಿದ್ದರೆ ಅಂದು ಅಪೂರ್ಣತೆಯು ನನ್ನನ್ನು ಕಾಡುತ್ತಿತ್ತು. ನನ್ನ ರತಿತನ ನನ್ನಲ್ಲಿ ಪ್ರಕಟವಾಗುವುದರ ಒಳಗೇ ನನ್ನವನು ನನ್ನನ್ನು ತಿನ್ನುತ್ತಿದ್ದ. ಆದರೆ ಇಂದು ಆತ ಹೇಳಿದ ರತಿಯೂ ನನ್ನ ಪಾಲಿಗೆ ಚಿಕ್ಕದು ಎಂದೆನಿಸಿತು. ನನ್ನ ರೂಪ ನನ್ನನ್ನೇ ಮೋಹಿಸುತ್ತಿತ್ತು. ನಿಧಾನವಾಗಿ ಅದರ ಅಂದದ ವೈವಿಧ್ಯಕ್ಕಾಗಿ ಹಲವಾರು ಭಂಗಿಗಳಲ್ಲಿ ನಿಂತೆ. ಕೈಗಳ ವಿನ್ಯಾಸವನ್ನು ಬದಬದಲಿಸಿ ಕಂಡೆ. ಹತ್ತು ಹಲವು ಕ್ರಮಗಳಲ್ಲಿ ನಕ್ಕು ನೋಡಿದೆ. ಕಣ್ಣು ಮಿಟುಕಿಸಿದೆ. ಓರೆ ನೋಟದ ಸೌಂದರ್ಯವನ್ನು ಹೀರತೊಡಗಿದೆ. ಅದೆಷ್ಟು ಹೊತ್ತು ಕನ್ನಡಿಯ ಎದುರು ನಿಂತೆನೋ ತಿಳಿಯದು. ನಾಚಿಕೆ ಬಿಟ್ಟು ಹೇಳಬೇಕೆಂದರೆ ಕನ್ನಡಿಯಲ್ಲಿಯ ರೂಪವನ್ನು ಗಂಡಾಗಿಸಿಕೊಂಡು ನಾನು ಹೆಣ್ಣಾಗುತ್ತಲೇ ಕರಗಿದೆ. ವಾಸ್ತವಕ್ಕೆ ಮರಳಿದಾಗ ಉತ್ಸಾಹದಲ್ಲೂ ಕರಗುತ್ತಲಿದ್ದೆ. ನಲ್ಲನಿಲ್ಲದ ಶೂನ್ಯತೆಯನ್ನು ಅನುಭವಿಸಲಾರದೆ ಹಾಸಿಗೆಯಲ್ಲಿ ಬೋರಲಾಗಿ ಕನ್ನಡಿಯನ್ನೇ ನಿಟ್ಟಿಸುತ್ತಲೇ ಇದ್ದೆ. ಕನ್ನಡಿಯಿಂದ ದೂರ ಸರಿಯುವ ಮನಸ್ಸಿನಿಂದ ನಲ್ಲನ ನೆನಪಿನಲ್ಲಿ ಬಂಧಿತಳಾದೆ.

ಹಾಸಿಗೆಗೆ ಸಿಂಪಡಿಸಿದ ಪನ್ನೀರು, ಅಲಂಕಾರಕ್ಕೆ ಬಳಸಿದ ಪರಿಮಳ ಹೂಗಳು ನನಗೆ ಅಮಲೇರಿಸಿ ಸ್ವಲ್ಪ ಹೊತ್ತು ನಲ್ಲನೊಂದಿಗೆ ಕಳೆದ ಕನಸನ್ನು ಕಂಡೆ. ಆತನಲ್ಲಿ ನನ್ನ ನಿವೇದನೆಗಳನ್ನೆಲ್ಲಾ ತೋಡಿಕೊಂಡೆ. ಹೆಚ್ಚೇಕೆ, 'ನಿನಗಾಗಿ ಪಟ್ಟ ಅವಸ್ಥೆಗಳನ್ನೆಲ್ಲಾ ಕಂಡು ಈ ಹಾಸಿಗೆ ಆದಿಯಾಗಿ ನಾಚಿದೆ' ಎಂದೆ. ಇನ್ನೂ ಏನೇನೋ ನಾನು ನನ್ನೊಳಗೇ ಮಾತನಾಡುತ್ತಲೇ ಇದ್ದೆ.

ಇದ್ದಕ್ಕಿದ್ದಂತೆ ಹೊರಗಡೆಯ ಸದ್ದು. ತತ್ಕ್ಷಣ ನನ್ನ ಕಣ್ಣು ಮುಚ್ಚಿದ ಎರಡು ಕೈಗಳು; ಊಹೆ ಮಾಡಿದೆ. ಮುಟ್ಟಿದರೆ ಮುನಿ ಎಂಬ ಮುಳ್ಳುಗಿಡದಂತೆ ಮುದುಡಿ ಮಿಸುಕಾಡಿದೆ. ಪ್ರತಿಕ್ರಿಯೆ ಇರಲಿಲ್ಲ. ಕೈ ಮುಟ್ಟಿದೆ. ಗಡುಸಾಗಿಯೇ ಇದೆ. ಆದರೂ ಸ್ಪರ್ಶದ ರೋಮಾಂಚನ ಇಲ್ಲ. ಯಾಕೋ ಅನುಮಾನಿಸಿದೆ. ನಿಧಾನವಾಗಿ ಮೀಸೆಯನ್ನು ತಿಮರಿಬಿಡುವೆ ಎಂದು ಮುಖದ ಮೇಲೆ ಕೈಯಾಡಿಸಿದೆ. ಮೀಸೆ ಇಲ್ಲ. ರಪ್ಪನೆ ದೂರಸರಿದು ನೋಡಿದರೆ ನನ್ನ ಆತ್ಮೀಯ ಗೆಳತಿ. ಪಕ್ಕದಲ್ಲಿಯ ಆಕೆ ನನ್ನ ಸಡಗರದ ಸೂಕ್ಷ್ಮ ಅರಿತು ನನ್ನನ್ನು ರೇಗಿಸಲು ಬಂದವಳು. ನನಗೋ ಕೋಪ–ತಾಪ–ಬೇಸರ–ಕೃತಕನಗು ಎಲ್ಲಾ ಭಾವಗಳು ನನ್ನನ್ನು ತಿನ್ನುತ್ತಿತ್ತು. ಅಂತೂ ಆಕೆಯನ್ನು ಸಾಗಹಾಕಿದೆ. ನನ್ನ ಶೃಂಗಾರದ ಸಿದ್ಧತೆಯಲ್ಲಿ ನನ್ನವನಿಗಾಗಿ ಮುಡಿಪಾಗಿಟ್ಟ ನನ್ನ ಭಾವನೆಯ ತೀವ್ರತೆಗೆ ಭಂಗ ಆಯ್ತು. ಏನೋ ಮೈಲಿಗೆ ಆದವರಂತೆ ಮುಖ ಬಿಳಿಚಿತು. ನನ್ನ ಗೆಳತಿಗೆ ಇದೆಲ್ಲಾ ಹೇಗೆ ಅರ್ಥವಾದೀತು? ಹಂತಹಂತವಾಗಿ ನನ್ನ ತೀವ್ರತೆಯೂ ಕಡಿಮೆ ಆಗಿ ದೇವರ ಮುಡಿ ಸೇರುವ ಹೂವು ಪೂಜಾರಿ ಬರದೆ ಪೂಜೆಯೂ ಇಲ್ಲದೆ ಹಾಗೆಯೇ ಒಣಗಿ ಹೋಗುವಂತೆ ಒಣಗಲಾರಂಭಿಸಿದೆ...

ರಂಗ-ಭ್ರಮರಿ

# ಯಕ್ಷಗಾನ ರಂಗಭಾಷೆ

–ಡಾ. ಚಂದ್ರಶೇಖರ ದಾಮ್ಲೆ, ಸುಳ್ಯ

**ರಂ**ಗಭಾಷೆಯೆಂದರೆ ರಂಗಕ್ಕೆ ಕಲಾವಿದರ ಪ್ರವೇಶ, ರಂಗಕ್ರಮಗಳು, ರಂಗ ಚಲನೆ, ರಂಗದಲ್ಲಿ ಪಾತ್ರಗಳ ಮುಖಾ–ಮುಖೀ ನಿಲುವುಗಳು, ರಂಗ ಸಮತೋಲನ, ರಂಗಸ್ಥಳದ ಪೂರ್ಣ ಉಪಯೋಗ ಮುಂತಾಗಿ ನಾಟ್ಯಾಭಿನಯದ ಮೂಲಕ ಪ್ರೇಕ್ಷಕನಿಗೆ ಕಥಾನುಭವವನ್ನು ನೀಡುವ ರಂಗ ತಂತ್ರವಾಗಿದೆ. ರಂಗಭಾಷೆಯು ಪ್ರತಿಯೊಂದು ನಾಟ್ಯ ಪ್ರಕಾರಕ್ಕೂ ಅದರದ್ದೇ ಆದ ಐಡೆಂಟಿಟಿಯನ್ನು ನೀಡುತ್ತದೆ. ಈ ಭಾಷೆ ಗೊತ್ತಿರುವವರೇ ಒಳ್ಳೆಯ ಪ್ರೇಕ್ಷಕರಾಗಬಲ್ಲರು. ಸಾಮಾನ್ಯವಾಗಿ ರಂಗಭಾಷೆಯ ಪರಿಚಯವಿರುವವರೇ ಪ್ರದರ್ಶನಗಳಿಗೆ ಬರುತ್ತಾರೆ ಹಾಗೂ ಕಲಾಸ್ವಾದನೆಯನ್ನು ಮಾಡುತ್ತಾರೆ.

ಕಲಾಪ್ರಕಾರಗಳ ವಿಭಿನ್ನತೆಯ ಪರಿಚಯವಾಗುವುದೇ ಅದರ ರಂಗಭಾಷೆಯಲ್ಲಿ. ಭರತನಾಟ್ಯ, ಕೂಚಿಪುಡಿ, ಕಥಕ್, ಕಥಕ್ಕಳಿ, ಯಕ್ಷಗಾನ ಇವುಗಳ ಮಧ್ಯೆ ಸಾಮ್ಯತೆಯ ಅಂಶಗಳನ್ನು ಹೆಕ್ಕಿ ತೆಗೆಯಬಹುದಾದರೂ ಮೇಲ್ನೋಟಕ್ಕೇನೇ ಅವುಗಳ ನಡುವೆ ವ್ಯತ್ಯಾಸವಿರುವುದು ರಂಗಭಾಷೆಯ ಪ್ರಭೇದದಿಂದಾಗಿಯೇ. ಇದು ಕೇವಲ ಆಹಾರ್ಯಭೇಧದಿಂದಾಗಿ ಗೊತ್ತಾಗುವುದಲ್ಲ. ಆಯಾ ಕಲೆಗಳ ರಂಗಭಾಷಾ ಭೇದದಿಂದಾಗಿಯೇ ಗೊತ್ತಾಗುವಂತಹದು.

ಉದಾಹರಣೆಗೆ ಯಕ್ಷಗಾನದ ತೆಂಕುತಿಟ್ಟು ಮತ್ತು ಬಡಗುತಿಟ್ಟು ಇವುಗಳ ನಡುವೆ ರಂಗಭಾಷಾ ಪ್ರಭೇದವಿರುವುದರಿಂದಲೇ ನಾವು ಅವುಗಳನ್ನು ನೋಡುವಾಗಲೇ ನಮ್ಮ ದೃಷ್ಟಿಯನ್ನು ಹೊಂದಿಸಿಕೊಂಡಿರುತ್ತೇವೆ. ರಂಗಸ್ಥಳದಿಂದ ಸರಿಯಾದ ಭಾಷೆಯಲ್ಲೇ ಕಥಾನಕ ಪ್ರದರ್ಶನವಾದರೆ ಮಾತ್ರ 'ಆಟ ಚೆನ್ನಾಗಿತ್ತು' ಎಂದು ಹೇಳಲು ಸಾಧ್ಯ. ಇಲ್ಲಿ ನಾಟ್ಯ, ವೇಷಭೂಷಣ, ಅಭಿನಯ, ಅರ್ಥಗಾರಿಕೆಗಳಷ್ಟೇ ಅಲ್ಲ, ರಂಗಸ್ಥಳದ ಸಮತೋಲನ ಹಾಗೂ ಪೂರ್ಣ ಉಪಯೋಗ ಹೇಗೆ ಮಾಡಿದ್ದಾರೆ ಎಂಬುದೂ ಮುಖ್ಯ.

ರಂಗಸ್ಥಳದಲ್ಲಿ ರಥದ ಮೇಲೆ ಕುಳಿತು, ಕೆಳಗಿಳಿದು ನಿಂತು, ಕುಣಿದು, ಓಡಾಡಿ, ಇನ್ನೊಬ್ಬರಿಗೆ ಸ್ಪಂದಿಸಿ, ಯುದ್ಧಕ್ರಮಗಳನ್ನು ನಿರ್ವಹಿಸಿ ಮಾಡುವ ಎಲ್ಲ ಕೆಲಸಗಳ ಸಂದರ್ಭದಲ್ಲಿಯೂ ಇದು ಪ್ರೇಕ್ಷಕರನ್ನು ತಲುಪುವ ಭಾಷೆಯಲ್ಲಿದೆಯೇ ಎಂಬ ಎಚ್ಚರ ಕಲಾವಿದನಿಗೆ ಇರಬೇಕು. ಹಾಗಾಗಿ ಒಬ್ಬನೇ ಪಾತ್ರಧಾರಿ ಇದ್ದಾಗ ನಿಲ್ಲಬೇಕಾದ ಸ್ಥಳ, ಇಬ್ಬರಿದ್ದಾಗ ಪರಸ್ಪರ ಸ್ಪಂದಿಸುತ್ತ ನಿಲ್ಲುವ ಕ್ರಮ, ಅನೇಕ ಪಾತ್ರಧಾರಿಗಳಿದ್ದಾಗ ಆವರಿಸಬೇಕಾದ ರಂಗದ ವರ್ತುಲ, ಅದರ ಮಧ್ಯ ಭಾಗ, ಎದುರು ಮೂಲೆಗಳು, ಹಿಂದಿನ ಮೂಲೆಗಳು ಮುಂತಾದುವುಗಳನ್ನು ಸಮರ್ಪಕವಾಗಿ ಅರಿತು ಬಳಸಿಕೊಳ್ಳುವುದೇ ರಂಗಭಾಷೆ. ಹೀಗಾಗಿ ಯಕ್ಷಗಾನದ ಪರಂಪರೆಯಲ್ಲಿ ರಂಗಭಾಷೆಯನ್ನು ಹೇಗೆ ನಿರೂಪಿಸಿದ್ದಾರೆಂಬುದನ್ನು ಹಿರಿಯರಿಂದ ತಿಳಿದು ದಾಖಲಿಸಿಕೊಳ್ಳುವುದು ಉಪಯುಕ್ತ ಕಾರ್ಯವೆನಿಸುತ್ತದೆ.

ಉದಾ: ತೆಂಕುತಿಟ್ಟಿನ ಧಿತ್ತದ ಕ್ರಮವು ಬಹಳ ವ್ಯವಸ್ಥಿತವಾಗಿದೆ. ವೇಷಧಾರಿಗಳಿಬ್ಬರೂ ಸರಿಯಾದ ನಾಟ್ಯಾಭ್ಯಾಸಿಗಳಾಗಿದ್ದರೆ ಇದು ಒಂದು ಸುಂದರವಾದ ಮುಖಾ–ಮುಖೀ ನೃತ್ಯ. ಇದು ರಂಗಸ್ಥಳದ ಮಧ್ಯದಲ್ಲೇ

ನಡೆಯಬೇಕಾದುದು. ಆದರೆ ಇಂದಿನ ಯಕ್ಷಗಾನದ ಆಟಗಳಲ್ಲಿ ಇದು ಒಟ್ಟಾರೆಯಾಗಿ ಮುಗಿದು ಹೋಗುತ್ತದೆ. ಹಾಗೆಯೇ ಎದುರಾಳಿಗಳು ನಿಲ್ಲಬೇಕಾದ ಕ್ರಮ, ವೀರೋಚಿತವಾಗಿ ನೃತ್ಯಾಭಿನಯದಲ್ಲೇ ಪರಸ್ಪರ ಸ್ಪಂದಿಸುವ ಮತ್ತು ಕೆಣಕುವ ಕ್ರಮಗಳನ್ನು ಮಾಡಿದರೆ ರಂಗಭಾಷೆಯ ಮೂಲಕವೇ ಪ್ರದರ್ಶನವನ್ನು ಪ್ರೇಕ್ಷಕನಿಗೆ ತಲುಪಿಸಿದಂತಾಗುತ್ತದೆ.

ಕಥಕ್, ಕೂಚಿಪುಡಿ, ಭರತನಾಟ್ಯ ಮುಂತಾದುವುಗಳಲ್ಲಿ ಹಿಮ್ಮೇಳದವರು ಒಂದು ಬದಿಯಲ್ಲಿ ಕುಳಿತಿರುತ್ತಾರೆ. ಆದರೆ ಯಕ್ಷಗಾನದಲ್ಲಿ ಹಿಮ್ಮೇಳದವರು ಪ್ರೇಕ್ಷಕರಿಗೆದುರಾಗಿ ಕುಳಿತಿದ್ದು ರಂಗದ ಒಂದು ಪ್ರಧಾನ ಭಾಗವಾಗಿ ಬಿಡುವುದರಿಂದ ಈ ರಂಗಭಾಷೆಯ ಸಂಕೀರ್ಣತೆ ಹೆಚ್ಚಾಗುತ್ತದೆ. ಅವರ ಅಂಗಿ ಮುಂಡಾಸುಗಳು ಕೂಡಾ ಮುಖ್ಯವಾಗುತ್ತವೆ. ಅದರ ಜೊತೆಗೆ ಪ್ರದರ್ಶನ ಕ್ರಿಯೆಯಲ್ಲಿ ಅವರ ಪೂರ್ಣ ತೊಡಗಿಸಿಕೊಳ್ಳುವಿಕೆ (Involvement) ಮುಖ್ಯವಾಗುತ್ತದೆ. ಅವರ ಇತರ ಯಾವುದೇ ವರ್ತನೆಗಳು ಪ್ರೇಕ್ಷಕನಿಗೆ ನೇರವಾಗಿ ತಲುಪುವುದರಿಂದ ಅವು ರಂಗಭಾಷೆಗೆ ತೊಡಕನ್ನುಂಟು ಮಾಡುತ್ತವೆ.

ಹೀಗಾಗಿ ಮುಮ್ಮೇಳ ಹಾಗೂ ಹಿಮ್ಮೇಳ ಒಟ್ಟಾಗಿ ಪ್ರಸಂಗವನ್ನು ಪ್ರೇಕ್ಷಕರಿಗೆ ತಲುಪಿಸುವಲ್ಲಿ ದುಡಿಯಬೇಕಾಗುತ್ತದೆ. ಇದರಲ್ಲಿ ಹೆಚ್ಚಿನ ಶ್ರದ್ಧೆ ತೋರುವುದರಿಂದಲೇ ಬಡಗುತಿಟ್ಟಿನ ಆಟಗಳು ಕಲಾಸ್ವಾದಕರಿಗೆ ಇಷ್ಟವಾಗುತ್ತವೆ. ಅನೇಕ ಯಕ್ಷಗಾನ ಕಲಾಸಕ್ತರು ಬೆಂಗಳೂರಿನಲ್ಲಾಗಲೀ, ಊರಿನಲ್ಲಾಗಲೀ ಕೇಳುವ ಪ್ರಶ್ನೆಯೆಂದರೆ ಬಡಗುತಿಟ್ಟಿಗೆ ಜನಸೇರುವಂತೆ ತೆಂಕುತಿಟ್ಟಿಗೆ ಯಾಕೆ ಸೇರುವುದಿಲ್ಲ? ಈ ಪ್ರಶ್ನೆಯ ಪ್ರಸ್ತುತತೆಯನ್ನೇ ತೆಂಕಿನವರು ಆಕ್ಷೇಪಿಸಬಹುದು. ಆದರೆ ಪ್ರಶ್ನೆ ಇರುವುದಂತೂ ಸತ್ಯ.

ನನ್ನ ಉತ್ತರವೇನೆಂದರೆ ತೆಂಕಿನಲ್ಲಿ ರಂಗಭಾಷೆಯ ಕೊರತೆಯದ್ದೇ ಸಮಸ್ಯೆ. ಪ್ರದರ್ಶನದ ಯಶಸ್ಸಿಗೆ ಹಿಮ್ಮೇಳ–ಮುಮ್ಮೇಳದವರ ಪೂರ್ಣ ತೊಡಗಿಸಿಕೊಳ್ಳುವಿಕೆ ಹಾಗೂ ರಂಗ ಭಾಷೆಯೂ ಮುಖ್ಯ. ಹಿಂದಿನಿಂದ ಇದ್ದ ಕ್ರಮಗಳನ್ನು ಅಲ್ಪ–ಸ್ವಲ್ಪ ಬಿಡುವುದರಲ್ಲಿ ನಿರ್ದೇಶಕರ ತಗಾದೆ ಇಲ್ಲದಿರುವುದೂ ಇದಕ್ಕೆ ಕಾರಣ. ಹಾಗಾಗಿ ಕಲಾವಿದರು ಭಾಗವತರ ನಿರ್ದೇಶನದಲ್ಲಿ ದುಡಿಯಲು ಸಿದ್ಧರಾಗಿ ಭಾಗವತರು ರಂಗಭಾಷೆಯ ಮರ್ಮಗಳನ್ನರಿತು ನಿರ್ದೇಶನ ನೀಡಿದರೆ ಆಗ ಯಕ್ಷಗಾನ ಪ್ರದರ್ಶನ ಮನಮುಟ್ಟುವುದರಲ್ಲಿ ಸಂದೇಹವಿಲ್ಲ. ಈ ದೃಷ್ಟಿಯಿಂದ ರಂಗಭಾಷೆಯ ಅಧ್ಯಯನ ಕಾರ್ಯಾಗಾರಗಳನ್ನು ನಡೆಸುವ ಅಗತ್ಯವಿದೆ.

**(ಲೇಖಕರು ತೆಂಕುತಿಟ್ಟು ಯಕ್ಷಗಾನ ಹಿತರಕ್ಷಣಾ ವೇದಿಕೆಯ ಅಧ್ಯಕ್ಷರು,<br>ಮತ್ತು ಸಮಾಜಶಾಸ್ತ್ರದ ಹಿರಿಯ ಉಪನ್ಯಾಸಕರು)**

## ನಮ್ಮ ಬಳಗದಲ್ಲಿ......

- **ಜಯಲಕ್ಷ್ಮೀ ಆಳ್ವ, ಹಿರಿಯ ನೃತ್ಯಗುರುಗಳು, ಮಂಗಳೂರು.**
- **ಉಳ್ಳಾಲ್ ಮೋಹನ್ ಕುಮಾರ್, ನಾಟ್ಯನಿಕೇತನ, ಕೋಲ್ಯ, ಮಂಗಳೂರು.**



## ನಿಮ್ಮ ಬರಹ ನಮ್ಮ ಓದು...

**ಕಳೆದ ಬಾರಿಯ ವಿಶೇಷ ಸಂಚಿಕೆಯನ್ನು ಮನದುಂಬಿ ಶ್ಲಾಘಿಸಿದ ಹಿರಿಯರು, ವಿದ್ವಾಂಸರು ನೂರಾರು ಮಂದಿ. (ಹಾಗಾಗಿ ಅವರೆಲ್ಲರ ಹೆಸರನ್ನು ಹೇಳುತ್ತಾ ಹೊರಟರೆ ಸಾಲುಪುಟಗಳೇ ಬೇಕಾಗಬಹುದು.) ಯಕ್ಷಗಾನದ ಸ್ತ್ರೀ ವೇಷ ಪಾತ್ರಧಾರಿಗಳ ದರ್ಶನ ಭ್ರಮರಿಗೆ ಹೆಚ್ಚಿನ ಪ್ರತಿಕ್ರಿಯೆಗಳು ಬಂದಿವೆ. ಅದರಲ್ಲೂ ಮುಖಪುಟ ಮತ್ತು ಪುಟವಿನ್ಯಾಸಕ್ಕೆ ಬಹಳ ಉತ್ತಮ ಪ್ರತಿಕ್ರಿಯೆಗಳು ಬಂದಿವೆ. ಮುಖಪುಟಕ್ಕೆ ರೂಪದರ್ಶಿಯಾದವರು ಪದವಿ ವಿದ್ಯಾರ್ಥಿನಿ ಕುಮಾರಿ ತೇಜಸ್ವಿನಿ. ಪುತ್ತೂರಿನ ಮೂಕಾಂಬಿಕ ನೃತ್ಯಶಾಲೆಯ ಸಹೃದಯಿ ನೃತ್ಯ ಕಲಾವಿದ ವಿದ್ವಾನ್ ದೀಪಕ್ ಕುಮಾರ್ ಅವರ ಶಿಷ್ಯೆ.**

**ಈ ಸಾಲಿನಿಂದ ತಲಕಾವೇರಿ–ಭಾಗಮಂಡಲ ಮುಜ್ರಾಯಿ ಕಮಿಟಿಯ ವ್ಯವಸ್ಥಾಪಕ ಸಂಪತ್ ಕುಮಾರ್, ಕಲಾ ಸಹೃದಯಿ ಪುರುಷೋತ್ತಮ ಭಟ್, ಜ್ಯೋತಿ ನಾರಾಯಣ ರಾವ್, ಬೆಂಗಳೂರಿನ ಕರ್ನಾಟಕ ಸಾಂಸ್ಕೃತಿಕ ವೇದಿಕೆಯ ಎಸ್.ಎನ್. ಪಂಜಾಜೆ, ಹಿರಿಯ ಕಲಾವಿದೆ– ಬರಹಗಾರ್ತಿ ವೇದಪುಷ್ಪ, ಸಂಘಟಕ ಕೆ. ಪಿ. ರಾಜಗೋಪಾಲ್, ಕಲಾರಸಿಕರಾದ ವಿ.ಎಸ್. ಶಿವರುದ್ರಯ್ಯ, ಅಕ್ಷತಾ, ಮಂಜುನಾಥ ಭಟ್, ಕಲಾವಿದರಾದ ಪ್ರಿಯಾ ರಾಮನ್, ನಿವೇದಿತಾ ಶ್ರೀನಿವಾಸ್, ಪುತ್ತೂರಿನ ಪೃಥ್ವಿಕಾ ಆಚಾರ್, ಶ್ರೀಲಕ್ಷ್ಮೀ ಆಚಾರ್ಯ, ಶ್ರುತಿ ಎನ್. ರೈ, ಸೌಜನ್ಯ ಭಟ್, ಮೇಘಾ ದೇವಾಡಿಗ, ದೀಪಿಕಾ ರಾವ್, ಅನುಷಾ ಜೈನ್, ತೇಜಸ್ವಿನಿ ರಾವ್, ಶ್ರಾವ್ಯಾ ಗೌಡ, ಶ್ರೀನಿಧಿ ಭಟ್, ಶ್ವೇತಲ್ ಶಿರಿನ್ ವೇಗಸ್ ವರ್ಷದ ಹೊಸ ಸದಸ್ಯರಾಗಿದ್ದಾರೆ.**

ನೂಪುರವು ಐದನೇ ಸಂವತ್ಸರದ ಉತ್ತುಂಗದಲ್ಲಿರುವುದು ಹೆಮ್ಮೆಯ ಮಾತು. ಮಾತ್ರವಲ್ಲ, ಪಂಚಮಂ ಕಾರ್ಯಸಿದ್ಧಿ ಎಂದು ಓದುಗರಾದ ನಾವು ಹೆಮ್ಮೆ ತಾಳಲೇಬೇಕು. ಇದರ ಸಾರಥ್ಯದಲ್ಲಿರುವ ತಾವು ಧನ್ಯತಾ ಧನ್ಯರು. ಸಾಹಿತ್ಯಕ್ಕೆ ಶಿರಸವಂದಿಸಿರುವೆನಾದ್ದರಿಂದಲೋ ಏನೋ ನೂಪುರ ಭ್ರಮರಿಯು ನನ್ನ ಪಾಲಿಗೆ ಸ್ಮರಣೀಯ ಸಂಚಿಕೆಯಾಗುತ್ತಲಿದೆ. ಕೃತಜ್ಞತೆಗಳನ್ನು ಎಷ್ಟು ಸಮರ್ಪಿಸಿದರೂ ಸಾಲದಾಗಿದೆ. ನರ್ತನ ಜಗತ್ತಿನ ಕನ್ಯೆಯೋರ್ವಳು ಆಕಾಶಮುಖವಾಗಿ ಮುಖಪುಟದಲ್ಲಿ ನಿಂತ ಭಂಗಿಯು ಯಾರನ್ನಾದರೂ ಆಕರ್ಷಿಸುತ್ತಲೇ ಇದೆಯೆಂಬುದರಲ್ಲಿ ಎರಡು ಮಾತಿಲ್ಲ. ಓದಿದ್ದನ್ನೇ ಇನ್ನೊಮ್ಮೆ ಓದುತ್ತಾ ಮತ್ತೊಮ್ಮೆ ಓದೋಣವೆಂಬುದು ಓದುಗನ ಪಾಲಿಗೆ ಮಡಿಲು ತುಂಬಿದಂತಿದೆ.

**– ಮಾಸ್ಟರ್ ವಿಠಲ್, ಹಿರಿಯ ನೃತ್ಯಗುರುಗಳು, ಮಂಗಳೂರು.**

ನಮ್ಮ ಶಾಸ್ತ್ರೀಯ ಕಲೆಗಳ ಕುರಿತಾದ ನಿಮ್ಮ ಕಾಳಜಿ ಸ್ತುತ್ಯಾರ್ಹ. ಪತ್ರಿಕೆ ಎಲ್ಲಾ ರೀತಿಯ ಯಶಸ್ಸನ್ನು ಗಳಿಸಲೆಂದು ಹಾರೈಸುತ್ತೇನೆ.

**– ಎಲ್. ಈಶ್ವರಯ್ಯ, ಹಿರಿಯ ಕಲಾ ವಿಮರ್ಶಕರು, ಉಡುಪಿ.**

Thank you for the finer details I am learning about nuances of dance and to enjoy dance as a inner happiness.

***-V. S. Shivarudrayya, Bangalore.***

In the Magha-phalguna edition of 2011, a write up on 'Bhaminiya bhavabhivyakti' by Mantapa Prabhakara Upadhya takes one, through the different ávasthas' of a 'proshitha patika nayika' . Sincere appreciation for the efforts shown by a male artiste on the pangs of separation of a woman!

While I was carried away through the story, I encountered a defect at the point where the noose of the well is mocking at her.. Till here, the story is told in the third person. But suddenly at this point, it becomes a first person's experience. It took some time for me to get adjusted to the flow. No doubt the effort of the stalwart has to be lauded but this simple mistake made it fall short of a possible rasaanubhava...

***-Niveditha Shrinivas, Bharathanatyam dancer, Bangalore.***

## ಅಂಗಳದ ಮಾತು ತಿಂಗಳ ಚರ್ಚೆ

# ಮಧುರ ಭಕ್ತಿ v/s ಶೃಂಗಾರ

**ಕ**ಲೆಯೆನ್ನುವುದು ಒಬ್ಬ ಕಲಾವಿದನ ಅತೀ ಉತ್ಕಟ ಭಾವದ ಅಭಿವ್ಯಕ್ತಿ. ಒಬ್ಬ ಕಲಾವಿದ ಗಂಡು ಹೆಣ್ಣಿನ ಪ್ರೀತಿ–ಮಿಲನದಲ್ಲಿ ಭಾವನೆಗಳ ಉತ್ತುಂಗ ಶಿಖರವನ್ನು ಕಂಡರೆ; ಇನ್ನೊಬ್ಬ ಕಲಾವಿದ ಅದೇ ಮಿಲನದಲ್ಲಿ ದೈವಸಾಕ್ಷಾತ್ಕಾರವನ್ನು, ಭಕ್ತಿಯ ಪರಾಕಾಷ್ಟೆ ಕಾಣಬಹುದು. ಕಲೆಯ ಸಾಮ್ರಾಜ್ಯದಲ್ಲಿ ಪ್ರೀತಿ–ಒಲವುಗಳು ಎಲ್ಲಕ್ಕಿಂತ ಉತ್ಕಟವಾದ ಭಾವನೆಯೆನ್ನುವುದು ಎಲ್ಲರೂ ಒಪ್ಪುವ ಮಾತೇ ಆದರೂ ಆ ಒಲವನ್ನು ಒಬ್ಬೊಬ್ಬರು ಅರ್ಥೈಸುವ ರೀತಿ ಬೇರೆ ಬೇರೆ. ಒಬ್ಬೊಬ್ಬರ ದೃಷ್ಟಿಕೋನವೂ ಬೇರೆ. ರುಕ್ಮಿಣಿದೇವಿಯವರು ಎಲ್ಲಾ ತರಹದ ಪ್ರೀತಿ–ಪ್ರೇಮದಲ್ಲೂ ದೈವಿಕ ಭಾವವನ್ನು ಕಂಡರು. ಅವರು ಕಂಡ ಸತ್ಯದ ಬೆಳಕಿನಲ್ಲಿ ನಮ್ಮನ್ನು ನಡೆಸಿಕೊಂಡು ಹೋದರು. ಅವರ ಮಾರ್ಗದರ್ಶನದಲ್ಲಿ ನಾನು, ಕಲೆಯ ಆರಾಧನೆ ನಮ್ಮನ್ನು ಮೋಕ್ಷಕ್ಕೆ ಒಯ್ಯುವ ಪಥವೆಂದು ಅರಿತುಕೊಂಡೆ.

ಭಕ್ತಿ ಶೃಂಗಾರದ ಕಲ್ಪನೆ ಹೊಸತೇನೂ ಅಲ್ಲ. ಹನ್ನೆರಡನೇ ಶತಮಾನದಲ್ಲಿ ಅಕ್ಕಮಹಾದೇವಿ, ಹದಿನಾರನೇ ಶತಮಾನದಲ್ಲಿ ಸಂತ ಮೀರಾಬಾಯಿ ಪರಮಾತ್ಮನಲ್ಲಿ ತಮ್ಮ ಪ್ರಿಯಕರನನ್ನು ಗುರುತಿಸಿಕೊಂಡು ಭಕ್ತಿ ಶೃಂಗಾರವನ್ನು ಪ್ರತಿಪಾದಿಸಿದರು. ಇದೆಲ್ಲವೂ ಅವರವರ ಅನುಭವದ ಆಳ; ಅವರ ಸೂಕ್ಷ್ಮ ಸಂವೇದನೆ ಹಾಗೂ ಅವರ ನಂಬುಗೆ. ಹೀಗಾಗಿ ಭಕ್ತಿ ಶೃಂಗಾರವನ್ನು ನೃತ್ಯಕ್ಕೆ ಅಳವಡಿಸಿದ್ದು ಸರಿಯೇ ಅಥವಾ ತಪ್ಪೇ ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಕಲೆಯೆನ್ನುವುದು ಯಾರೊಬ್ಬರ ನಂಬುಗೆಗೂ ಸೀಮಿತವಾಗಿಲ್ಲ. ತಾವು ಕಂಡಂತೆ ಒಂದು ವಸ್ತುವನ್ನು ಅರ್ಥೈಸಿ ಅದನ್ನು ಅಭಿವ್ಯಕ್ತಿಪಡಿಸುವ ಸ್ವಾತಂತ್ರ್ಯ ಎಲ್ಲಾ ಕಲಾವಿದರಿಗೂ ಇದ್ದಂತೆಯೇ ಇತರ ಸಿದ್ಧಾಂತ, ಆಲೋಚನೆಗಳನ್ನು ಒಪ್ಪುವ ಅಥವಾ ಬಿಡುವ ಸ್ವಾತಂತ್ರ್ಯವೂ ಇದೆ.

**– ಪ್ರೊ. ಎಂ. ಆರ್. ಕೃಷ್ಣಮೂರ್ತಿ**

**ಹಿರಿಯ ನೃತ್ಯಗುರುಗಳು, 'ಕಲಾಕ್ಷಿತಿ', ಬೆಂಗಳೂರು.**

**ಸಾದರ ಸ್ವೀಕಾರ : ನಾಟ್ಯರಂಗದ ರಾಜಗುರು ನಾಟ್ಯಾಚಾರ್ಯ ಪ್ರೊ. ಎಂ. ಆರ್. ಕೃಷ್ಣಮೂರ್ತಿ ಅವರಿಗೆ ನುಡಿನಮನ.**

**ಲೇಖಕರು : ಡಾ. ಎಸ್. ಎಲ್. ಶ್ರೀನಿವಾಸಮೂರ್ತಿ**

**ಪ್ರಕಾಶಕರು : ನನಿತಾ ಹೊನ್ನಟ್ಟಿ, ಬೆಂಗಳೂರು.**

**ಪುಟ : 72**

**ಸಂಚಿಕೆಗಾಗಿ ಸಹಕರಿಸಿದವರು**

**ಶ್ರೀಮತಿ ಜಯಲಕ್ಷ್ಮೀ ಆಳ್ವ**
ಶ್ರೀದೇವಿ ನೃತ್ಯ ಕಲಾ ಕೇಂದ್ರ, ಬಲ್ಮಠ, ಮಂಗಳೂರು.

**ಶ್ರೀ ಉಳ್ಳಾಲ್ ಮೋಹನ್‌ಕುಮಾರ್**
ನಾಟ್ಯನಿಕೇತನ, ಕೋಲ್ಯ, ಮಂಗಳೂರು.




# ಭಟ್ಟರ ಬದುಕಿನ ರೋಚಕ ಕಥೆಗಳು!

* ರಾಕೇಶ್‌ಕುಮಾರ್ ಕಮ್ಮಜೆ

ಹಳೆಯ ಕಲಾವಿದರ ಕತೆಗಳನ್ನು ಕೆದಕುತ್ತಾ ಹೋದಂತೆ ಹೊಸ ಹೊಸ ಸಂಗತಿಗಳು ಅನಾವರಣಗೊಳ್ಳುತ್ತಲೇ ಇರುತ್ತವೆ. ಹಾಗಾಗಿ ಹಿಂದಿನ ಕಲಾವಿದರ ಕಥೆ ಬರಿದಾಗುವುದೇ ಇಲ್ಲ. ಈ ಹಿಂದೆ ಇದೇ ಅಂಕಣದಲ್ಲಿ ಮುಳಿಯಾಲ ಕೇಶವ ಭಟ್ ಅನ್ನುವ ವಿಶಿಷ್ಟ ವೇಷಧಾರಿಯೊಬ್ಬರ ಬಗೆಗೆ ಬರೆದದ್ದು ನಮ್ಮ ಮನಸಿನ ರಂಗಸ್ಥಳದಿಂದ ಮಾಸಿರಲಿಕ್ಕಿಲ್ಲ. ಯಾಕೋ ನನಗೆ ಸಾಕೆನಿಸಲಿಲ್ಲ. ಅವರ ಮತ್ತು ಅವರ ಕುರಿತಾದ ರೋಚಕ ಕಥೆಗಳ ಬಗೆಗೆ ಇನ್ನೂ ತಿಳಿದುಕೊಳ್ಳಬೇಕೆನಿಸಿತು. ಹಾಗೆ ಅವರ ಬಗೆಗೆ ಮಾಹಿತಿ ಸಂಗ್ರಹಿಸಬೇಕೆಂಬ ನಿಟ್ಟಿನಲ್ಲಿ ಹುಡುಕುತ್ತಾ ಹುಡುಕುತ್ತಾ ಹೋಗಿ ನಿಂತದ್ದು ಕರ್ನಾಟಕ–ಕೇರಳದ ಗಡಿಭಾಗ ಜತ್ತಿ ಎಂಬಲ್ಲಿ ವಾಸವಾಗಿರುವ ಅವರ ಹಿರಿಯ ಮಗಳು ಶ್ರೀಮತಿ ಲಕ್ಷ್ಮಿ ಅಮ್ಮನವರ ಮುಂದೆ! ಯಾವಾಗ ತನ್ನ ಅಪ್ಪನ ವಿಷಯ ಪ್ರಸ್ತಾಪವಾಯಿತೋ ಎಪ್ಪತ್ತರ ಅವರಲ್ಲಿ ಇನ್ನಿಲ್ಲದ ಉತ್ಸಾಹ ಕಾಣತೊಡಗಿತು. ಅವರು ಕಥೆ ಹೇಳುತ್ತಾ ಹೋದರು, ನಾನು ಕೇಳುತ್ತಾ ನಿಂತೆ! ಕಥೆ ಮುಗಿಯಲಿಲ್ಲ, ಆದರೆ ದಿನಮಣಿ ಮುಳುಗಿದ!!

ಅದೇನೇ ಇರಲಿ, ಅವರು ಹೇಳಿದ ಅನೇಕ ಸಂಗತಿಗಳಲ್ಲಿ ಅತ್ಯಂತ ಹೆಚ್ಚು ಅಚ್ಚರಿ ಮೂಡಿಸಿದ ಸಂಗತಿಗಳೆರಡನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ಈ ಹಿಂದಿನ ಬಾರಿ ಕೇಶವ ಭಟ್ಟರ ಬಗೆಗೆ ಹೇಳುವಾಗ ಅವರ ಭೀಮ, ರಕ್ತಬೀಜ ಮೊದಲಾದ ಪಾತ್ರಗಳ ಬಗೆಗೆ ಹೇಳಿದ್ದೆ. ಆದರೆ ಇನ್ನೊಂದು ಉಲ್ಲೇಖಿಸಲೇಬೇಕಾದ ಅವರ ಪಾತ್ರ ಮಹಿಷಾಸುರ. ಅವರಿಗೆ ಭೀಮ, ರಕ್ತಬೀಜರು ಎಷ್ಟು ಹೆಸರು ತಂದುಕೊಟ್ಟಿದ್ದರೋ ಅದಕ್ಕೆ ಸರಿಮಿಗಿಲಾಗಿ ಅವರ ಮಹಿಷಾಸುರನೂ ಹೆಸರು ಮಾಡಿದ್ದ. ಮಹಿಷಾಸುರನ ಬಗೆಗೆ ಹೇಳುವಾಗ ಒಂದು ಪ್ರಮುಖ ಘಟನೆಯನ್ನು ಹೇಳಲೇಬೇಕು. ನಂಬಿದರೆ ನಂಬಬಹುದು, ಬಿಟ್ಟರೆ ಬಿಡಬಹುದು.

ಭಟ್ಟರ ಮಹಿಷನ ಪ್ರವೇಶವಾಗುವಾಗ, ಆ ಮಹಿಷ ಹೂಂಕರಿಸುವಾಗ, ಮಹಿಷನ ಕಣ್ಣುಗಳು ತಿರುಗುವಾಗ ಸುತ್ತಲಿನ ಮಂದಿ ಅಕ್ಷರಶಃ ಹೆದರಿಹೋಗುತ್ತಿದ್ದರು. ಮಕ್ಕಳು ಹೆದರಿದರೆ ದೊಡ್ಡ ಸಂಗತಿಯಲ್ಲ, ದೊಡ್ಡವರೇ ಹೆದರುತ್ತಿದ್ದರೆಂದರೆ ಅದೆಂಥಾ ಮಹಿಷನಿರಬೇಕು ನೀವೇ ಯೋಚಿಸಿ. ಒಮ್ಮೆ ಬಂಟ್ವಾಳ ತಾಲೂಕಿನ ಮಿತ್ತನಡ್ಕ ಎಂಬಲ್ಲಿ ದೇವಿಮಹಾತ್ಮೆ, ಭಟ್ಟರ ಮಹಿಷಾಸುರ. ದೇವಿಮಹಾತ್ಮೆಯನ್ನು ನೀವು ನೋಡಿದ್ದೀರಾದರೆ ಮಹಿಷನ ಪ್ರವೇಶದ ಬಗೆಗೆ ನಿಮಗೆ ಗೊತ್ತಿರುತ್ತದೆ. ತಾಯಿ ಮಾಲಿನಿ 'ಮಗನೇ ಮಹಿಷಾ...' ಎಂದು ಕರೆದಾಗ ಮಹಿಷಾಸುರ ಪ್ರೇಕ್ಷಕರ ಹಿಂದಿನಿಂದ ಬೆಳಕಿನ ದೊಂದಿಗಳೊಂದಿಗೆ ವೇದಿಕೆಗೆ ಬರುವುದು. ಆ ದಿನವೂ ಮಾಲಿನಿ ಕರೆದಾಯಿತು. ಇತ್ತ ಭಟ್ಟರ ಮಹಿಷ ವೇದಿಕೆಯತ್ತ ಹೊರಟ. ಅಲ್ಲಿ ಪ್ರೇಕ್ಷಕರ ಸಾಲಿನ ಬದಿಯಲ್ಲಿ ಒಬ್ಬಾಕೆ ಗರ್ಭಿಣಿ ಹೆಂಗಸೂ ಇದ್ದಳು. ಯಾವಾಗ ಭಟ್ಟರ ಭಯಾನಕ ಮಹಿಷ ತನ್ನ ಬಳಿ ಬಂದನೋ ಆ ಭೀಕರ

ರೂಪಿಯನ್ನೂ, ಭಯಾನಕ ಸನ್ನಿವೇಷವನ್ನೂ ನೋಡಿ ಆಕೆ ಪತರಗುಟ್ಟಿಹೋದಳು. ಆ ಭಯ ಎಷ್ಟರಮಟ್ಟಿಗೆ ಉಳಿದುಹೋಯಿತೆಂದರೆ ಆಕೆಗೆ ವಿಪರೀತ ಜ್ವರ ಬಂತು. ಆಮೇಲೆ ಗರ್ಭವೇ ಅಳಿದುಹೋಯಿತೆಂಬ ಸುದ್ದಿಯೂ ಕೇಳಿಬಂತಂತೆ!

ಕೇಶವ ಭಟ್ಟರ ಬಗೆಗಿನ ಇನ್ನೊಂದು ಕುತೂಹಲಕಾರಿ ಸಂಗತಿಯನ್ನೂ ಈ ಹಿಂದೆ ನಿಮಗೆ ಹೇಳಿದ್ದೆ. ಅದೇ, ಅವರು ಪ್ರಸಿದ್ಧ ಮಂತ್ರವಾದಿಗಳೂ ಆಗಿದ್ದರೆಂಬ ಸಂಗತಿ. ಆ ಬಗೆಗೂ ಒಂದು ರೋಚಕ ಘಟನೆಯಿದೆ.

ಬಂಟ್ವಾಳ ತಾಲೂಕಿನ ವಿಟ್ಲದಿಂದ ಅಳಿಕೆಗೆ ಹೋಗುವ ಮಾರ್ಗಮಧ್ಯೆ ಪಡಿಬಾಗಿಲು ಎಂಬ ಪ್ರದೇಶ ಸಿಗುತ್ತದೆ. ಒಮ್ಮೆ ಅಲ್ಲಿ ಲಾರಿಯೊಂದು ನಿಂತುಹೋಯಿತು. ಏನೇನೇ ಪ್ರಯತ್ನ ಮಾಡಿದರೂ ಸ್ಟಾರ್ಟ್ ಆಗುತ್ತಿತ್ತೇ ವಿನಃ ಮುಂದೆ ಹೋಗುತ್ತಿರಲಿಲ್ಲ. ಕೊನೆಗೆ ಲಾರಿಯ ಮಂದಿ ಕೇಶವ ಭಟ್ಟರನ್ನು ಕರೆದುಕೊಂಡುಹೋಗಿ ತೋರಿಸಿದಾಗ ಭಟ್ಟರ ಮಂತ್ರವಾದಿ ಮನಸ್ಸಿಗೆ ಅಲ್ಲಿ ರಣಗಳ ಕಾಟವಿರುವುದು ಕಂಡುಬಂತು. ಕೂಡಲೇ ಭಟ್ಟರು ಒಂದು ಕೋಲು ಹಿಡಿದು, ಜಪಿಸಿ ದಬದಬನೆ ಲಾರಿಗೆ ಬಾರಿಸಿದರು. ಲಾರಿ ಹೊರಟಿತು!! ಹೌದು, ಭಟ್ಟರ ಮಂತ್ರವಾದ ಶಕ್ತಿ ಅಂತಿತ್ತು. ಅವರು ಮೇಳದೊಂದಿಗೆ ತಿರುಗಾಟಕ್ಕೆ ಹೋದಲ್ಲೂ ಗಂಟೆಗಟ್ಟಳೆ ಜಪಿಸುವುದನ್ನು ಮಾತ್ರ ಬಿಡುತ್ತಿರಲಿಲ್ಲ. ಈಗ ಹೇಳಿ ನಿಮಗೂ ವಿಸ್ಮಯ ಅನಿಸುತ್ತಿಲ್ಲವಾ? ■

## ಅಂಗಳದ ಮಾತು ತಿಂಗಳ ಚರ್ಚೆ......ಭಾಗವತಿಕೆ v/s ರಂಗಾಭಿನಯ

**ಸಂಪುಟ 4/6 ರ ರಂಗಸ್ಥಳದ ತಿಂಗಳ ಚರ್ಚೆಗೆ ಉತ್ತರ:** ಯಕ್ಷಗಾನದಲ್ಲಿ ವೀರಪಾತ್ರ ಪ್ರತಿಪಾದಕವಾದ ಏರುಪದ್ಯದ ಭಿನ್ನವಾಗುವ ಹಾಡುವಿಕೆಗೆ ಮೌಲಿಕ ಚಿಂತನೆ ಅಗತ್ಯ. ಬೊಬ್ಬೆ ಅನಗತ್ಯ. ಆದರೆ ಈಗಲೂ ಅದೇ ಹೆಚ್ಚಿಗೆ ಇದೆ. ತೆಂಕಲ್ಲೂ–ಬಡಗಿನಲ್ಲೂ ಏರುಪದ್ಯಗಳಲ್ಲಿ ಬಡಗು ತಿಟ್ಟಿನ ಹಳೆ ವಿಧಾನ ಸುವ್ಯವಸ್ಥಿತವಲ್ಲ. ಆದರೆ ಒಟ್ಟಿನಲ್ಲಿ ಏರುಪದಗಳ ಕುರಿತು ವಿವೇಚನೆ ಮಾಡುವಾಗ ದಿ. ಮಂಡೆಚ್ಚ, ಮಾಂಬಾಡಿ, ಉಪ್ಪೂರು, ನಾವಡ, ನೆಬ್ಬೂರು, ಪದ್ಯಾಣ, ಹೊಳ್ಳ ಭಾಗವತರ ಕೆಲವು ಧ್ವನಿ ಮುದ್ರಣ ಕೇಳಿ ಹೋಲಿಸಿ ನೋಡುವುದು; ಕಲೆಯಲ್ಲಿ ನಮಗೆ ವ್ಯಕ್ತಿಗಳ ಬಗೆಗೆ ಎಷ್ಟೇ ಅಭಿಮಾನವಿದ್ದರೂ ಯಾವುದು ಸರಿಯೆಂಬುದೇ ಮುಖ್ಯ ಹೊರತು ಯಾರು ಸರಿಯೆಂಬುದಲ್ಲ.

**ಸಂಪುಟ 5/1** ರ ಪುಟ 37ರಲ್ಲಿ ಕಾಣುವ ಒಂದು ವಿಚಾರ ನನಗೆ ಸ್ಪಷ್ಟವಾಗದೇ ಬರೆಯುತ್ತಿದ್ದೇನೆ. ಭಾಗವತನೊಬ್ಬ ಹಾಡನ್ನು ಆವರ್ತನ ಮಾಡಿ ಹಾಡುವಾಗ ಮುಂದಿನ ಹಂತಕ್ಕೆ ಹೋಗುವುದನ್ನು ಯಾರು ನಿರ್ಣಯಿಸಬೇಕು? ಭಾಗವತನು ಮುಂದಿನ ಎತ್ತುಗಡೆ ಮಾಡಿದ ಮೇಲೆ ನಟ ಅಥವಾ ಪಾತ್ರವೇ ಹೊಂದಿ ಕೊಳ್ಳಬೇಕು ಅಲ್ಲವೇ? ಇಲ್ಲವಾದರೆ ನಟನಿಂದ ಭಾಗವತನಿಗೆ ಪಾಠ ಆಗಿ; ಪಾತ್ರ, ಕಥೆಗಳ ಅಭಿವ್ಯಕ್ತಿ ಹೋಗಿ ಪ್ರಾತ್ಯಕ್ಷಿಕೆ ಆಗಿಬಿಡುತ್ತದೆ. ಬಡಗು ತಿಟ್ಟಿನ ಗದಾಯುದ್ಧವನ್ನು ಬಹಳ ಕಾಲದಿಂದ ಬಹಳ ಬಾರಿ ನೋಡಿದ ನನಗೆ ಈ ವಿಲಕ್ಷಣ ಸ್ಥಿತಿ ಕಂಡುಬಂದಿದೆ. ರಂಗದ ನಿರ್ವಹಣೆಗೆ ನಿರ್ಣಾಯಕ ಯಾರು? ನಟನೇ? ಭಾಗವತನೇ? –ಅಲ್ಲ ಅಥವಾ ಇಬ್ಬರೂ ಹೌದೇ? ಭಾಗವತನೇ ಆಗಬೇಕಿಲ್ಲವೆಂದು ಪೂರ್ವ ನಿರ್ಣಯ ಮಾಡದೆ ರಂಗ ದಲ್ಲೇ ನಿಶ್ಚಯಿಸಿ ಹೊರಟರೆ ಸರಿಯೇ? ಕಲಾನುಭವವೆಂಬುದು ಸಲೀಸಾಗಿ ಸಾಗಬೇಕಲ್ಲವೇ? ಬಲ್ಲವರು ತಿಳಿಸಿ.

**–ಡಾ. ಪ್ರಭಾಕರ ಜೋಷಿ, ಯಕ್ಷಗಾನ ವಿದ್ವಾಂಸರು, ಮಂಗಳೂರು.**



ಮುಕುಳ ಹಸ್ತ

# ಹಸ್ತ ಮಯೂರಿ

**ಲಕ್ಷಣ: ಎಲ್ಲ ಬೆರಳುಗಳ ತುದಿಯನ್ನು ಕೂಡಿಸುವುದು. ಮುಕುಳ ಎಂದರೆ ಮೊಗ್ಗು ಎಂದರ್ಥ. ಹಸ್ತ ಮುಕ್ತಾವಳಿಯಲ್ಲಿ ಇದೇ ಹಸ್ತವನ್ನು ಬಹುಮಟ್ಟಿಗೆ ಹೋಲುವ ಘೋರ್ಣಿಕ ಎಂಬ ಹಸ್ತವಿದೆ. ಅಲ್ಲಿ ವಿವರಿಸಲಾದ ಮುಕುಲವು ಕೂಡಾ ಇದೇ ಲಕ್ಷಣಗಳನ್ನು ಹೊಂದಿದ್ದು ಮೇಲ್ಮುಖಕ್ಕೆ ಚಾಚಬೇಕೆಂದಿದೆ. ಮಾರುತಿಯು ಸೂರ್ಯನನ್ನು ಬಿಂಬಾಫಲವೆಂದು ತಿಳಿದು ಹಿಡಿಯಲೆತ್ನಿಸಿದಾಗ ಉಂಟಾದ ಹಸ್ತ. ಸಂಕೀರ್ಣ ವರ್ಣ, ಕಪಿಲ (ತಿಳಿ ಬೂದು) ಬಣ್ಣ, ಋಷಿ : ವಿಷಖಿಲ, ಅಧಿದೇವತೆ : ಚಂದ್ರ.**

**ಶಾಸ್ತ್ರೀಯ ಮುದ್ರೆಗಳ** ಪೈಕಿ **ಸತ್ಯ ಮುದ್ರಾ ಎಂಬ ಮುದ್ರೆಯು** ಎಲ್ಲ ಬೆರಳುಗಳ ತುದಿಯನ್ನು ಒಂದಕ್ಕೊಂದು ಸೇರಿಸಬೇಕೆನ್ನುವುದು ಮುಕುಳ ಹಸ್ತಕ್ಕೆ ಸಮೀಪವೆಂಬಂತಿದೆ. **ಪೂಜಾ ಮುದ್ರೆಗಳ** ಪೈಕಿ **ಮುಕುಳ ಮುದ್ರೆ** ಎಂಬ ಎಂಬ ಮುದ್ರೆಯಿದ್ದು ಇಲ್ಲಿ ಮುಕುಳ ಹಸ್ತವನ್ನು ಎದೆಯಲ್ಲಿರಿಸಿಕೊಳ್ಳುವುದರಿಂದ ನೋವು ನಿವಾರಣೆ, ವಿದ್ಯುದಯಸ್ಕಾಂತ ಶಕ್ತಿಗಳ ಸೃಷ್ಟಿಯಾಗುತ್ತದೆನ್ನಲಾಗಿದೆ. ಸಮನ್ವಯ ಮುದ್ರೆಯೆಂಬುದು ಮುಕುಳಹಸ್ತವೇ ಆಗಿದ್ದು ; ಮಂತ್ರಸಂಕಲ್ಪ, ಶಕ್ತಿಸಂಚಯನಕ್ಕೆ, ಹೊಂದಾಣಿಕೆ, ಎಲ್ಲಾತತ್ವಗಳ ಸಮತೋಲನೆಗೆ ಪೂರಕ.

**ಗಾಯತ್ರೀ ನ್ಯಾಸ ಮುದ್ರೆಗಳ** ಪೈಕಿ **'ತತ್' ಉಚ್ಚಾರಕ್ಕೆ** ಸುಮುಖ ಮುದ್ರೆ ಅಂದರೆ ಎರಡೂ ಕೈಗಳಲ್ಲಿ ಮುಕುಳ ಹಸ್ತವನ್ನು ಪರಸ್ಪರ ಮುಟ್ಟುವಂತೆ ಸ್ಪರ್ಶಿಸಬೇಕೆನ್ನುತ್ತದೆ ಶಾಸ್ತ್ರ; ಮತ್ತು **'ಮ' ಅಕ್ಷರೋಚ್ಚಾರಣೆಗೆ** ಉನ್ಮುಖೋನ್ಮುಖ ಮುದ್ರೆ ಅಂದರೆ ಮುಕುಲ ಹಸ್ತಗಳ ತುದಿಗಳನ್ನು ಪರಸ್ಪರ (ಬಲ ಕೈ ಮೇಲೆ) ಮೇಲೆ ಕೆಳಗೆ ಸೇರಿಸಬೇಕೆಂದಿದೆ. **ರೋಗನಿವಾರಕ ಯೋಗ ಮುದ್ರೆಗಳ** ಪೈಕಿ ಒಂದಾದ **ಸಮಾನ ಮುದ್ರೆ** ಅಥವಾ **ಸೂಕರೀ ಮುದ್ರೆಯು** ಎರಡು ಮುಕುಳ ಹಸ್ತಗಳನ್ನು ಹಿಡಿದುಕೊಳ್ಳುವುದೇ ಆಗಿದ್ದು; ಪಂಚತತ್ವಗಳ ಸಂತುಲನೆಗೆ, ರೋಗ ನಿರೋಧಕ ಶಕ್ತಿಗೆ, ನೋವುಶಮನಕ್ಕೆ ಅನುಕೂಲ.

**ವಿನಿಯೋಗ :** ಕಮಲದ ಮೊಗ್ಗು, ಊಟ ಮಾಡುವುದು, ಪಂಚಬಾಣ (ಮನ್ಮಥ), ಮುದ್ರಾಧಾರಣೆ, ನಾಭಿ, ಬಾಳೆಹೂವು.

**ಇತರೇ ವಿನಿಯೋಗ :** ದೇವಾತಾರ್ಚನೆ, ವಿಟ ಚುಂಬನ, ನಿಂದೆ, ಹಣವನ್ನು ಎಣಿಸುವುದು, ಬಾಯನ್ನು ಮುಚ್ಚುವುದು, ದೈನ್ಯೋಕ್ತಿ, ಐದು ಎಂಬ ಸಂಖ್ಯೆ, ಜಪ, ಜೀವಾತ್ಮ, ಹಂದಿ ಮತ್ತು ಕುದುರೆಗಳ ಮುಖ, ವ್ಯರ್ಥವೆಂಬ ಸೂಚನೆ, ಬಲಿದಾನ, ಅವಸರ, ದಾನಮಾಡುವುದು, ಪ್ರಾರ್ಥನೆ, ಜೀವನ, 'ತಾನು', 'ಆತ್ಮ' ಎಂಬ ಭಾವ, ನೆಚ್ಚಿನವರ ಮಾತುಗಳು, ಮಕ್ಕಳನ್ನು ಮುದ್ದಿಸುವುದು, ಛತ್ರಿಯನ್ನು ಮಡಚುವುದು, ಹಣ್ಣುಗಳ ಸ್ವೀಕಾರ, ಕಪಿಲ ವರ್ಣ, ಮಿಶ್ರ ಜಾತಿ, ಕುಚಾದಿ ಸ್ಥಳಗಳಲ್ಲಿ ಶಬ್ದವಾಗುವಂತೆ ನಖಲೇಖನ ಮಾಡುವುದು, 'ಇಷ್ಟು ಮಾತ್ರ" ಎಂಬ ಭಾವ, ಬ್ರಹ್ಮ ರಂಧ್ರ, ಸೌಜನ್ಯ, ಧನಿಷ್ಟಾ ನಕ್ಷತ್ರ, ಹಕ್ಕಿ ಗುಟುಕು ಕೊಡುವುದು, ಮುಚ್ಚಿಕೊಂಡ ಹೂ, ಭಾಷಣ, ಮುಚ್ಚಿರುವ ತಾವರೆ, ಮಂತ್ರ ಪುನರುಚ್ಚಾರ, ಸ್ನೇಹ ಭಾವ, ದೀರ್ಘಾವಲೋಕನ, ಸಿಹಿರುಚಿ, ಗಿಳಿಗಳು ತಮ್ಮ ಮರಿಗಳಿಗೆ ಉಣಿಸುವುದು ಇತ್ಯಾದಿ.

ಮುಖಸಂಕೋಚ, ಉಡುಗೊರೆಗಳನ್ನು ಮಾಡುವುದು, ಬಲಿಗ್ರಹಣ, ಅರಳಿದ ಕುಮುದ ಪುಷ್ಪ ಮತ್ತು ತಾವರೆ, ಕೆಂಪು ಕುಮುದ ಪುಷ್ಪ, ಅರಳಿದ ಹೂವುಗಳು, ಭೋಜನ, ಮುತ್ತನ್ನೀಯುವುದು, ಚಿನ್ನವನ್ನು ಎಣಿಸುವುದು, ಪ್ರಭಾವ, ವಚನ, ಪಕ್ಷಿ, ಜಡತ್ವದ ಮನುಷ್ಯ, ರೋಗ, ಕಾರ್ತಿಕ ಮಾಸ, ಇಲಿ, ಲಗ್ನ ಮುಹೂರ್ತ, ನಕ್ಷತ್ರ, ರಾಶಿ ಗ್ರಹಮಂಡಲ, ಅರ್ಧ ದಿನ, ಕ್ಷಣ, ರಕ್ತ, ಮೃದುತ್ವ, ಲಾವಣ್ಯ, ವಿಕ್ರಮ, ಗೊತ್ತಿಲ್ಲದ ವಿಷಯ, ಬೆಲೆ, ನಿರ್ಮಾಣ, ಹುಣ್ಣಿಮೆಯ ರಾತ್ರಿ, ಅಮಾವಾಸ್ಯೆ, ವಿಷ್ಕಂಭ ಯೋಗ, ಯೋಗಪ್ರಕಾರಗಳು, ಸಾರ್ವತ್ರಿಕತೆ, ವಾರದ ಒಂದು ದಿನ, ತಿಂಗಳಿನ ನಿರ್ದಿಷ್ಟ ದಿನ, ಪಕ್ಷಾಂತ್ಯ, ಸಂಕ್ರಾಂತಿ, ಜೋಳ, ಕರಿಮೆಣಸು, ಆಮ್ಲ ದ್ರವ್ಯ, ಕಟು ದ್ರವ್ಯ, ಕೆಂಪು-ಹಳದಿ ಬಟ್ಟೆ, ಜನೋತ್ಸವ, 'ನಾನು,ನಾನು' ಎನ್ನುವುದು, ಪ್ರೇಮ, ಮಗ, ಇಷ್ಟಪಟ್ಟ ವಸ್ತು, ಭ್ರಮೆ, ಕಪ್ಪು ದುಂಬಿಗಳಲ್ಲಿ ಹೊಂದಾಣಿಕೆಯಿಲ್ಲದಿರುವುದು, ಮದುವೆ, ಪ್ರತಿಕ್ರಿಯೆ, ಕಿವಿ, ಆಲಿಸು, ಪ್ರಾಣವಾಯು, ಮಾತು, ಅಭಿವೃದ್ಧಿ, ನೀರು, ನೀರಿನ ಹಸಿವು, ವರಾಹಾವತಾರ, ನದೀಮುಖಜ ಪ್ರದೇಶ, ನೀರಿನ ಕವಲು, ಸಾಗರ, ದಹನ, ವಿಮೋಚನೆ, ಪ್ರಾಪ್ತಿ, ಘಟನೆ, ಪರಿಣಾಮ ಇತ್ಯಾದಿಗಳ ಸಂವಹನಕ್ಕೆ ಸೂಕ್ತವೆನಿಸುವುದು.



**ಸಂಕರ ಹಸ್ತ** ವಿಭಾಗದಲ್ಲಿ ಮುಕುಳ ಹಸ್ತವನ್ನು ಮೊದಲು ಮುಕುಳ ಹಸ್ತ ಹಿಡಿದು ಬಿಟ್ಟು ನಂತರ ಮೃಗ ಶೀರ್ಷವನ್ನು ಹಿಡಿದರೆ ವೃದ್ಧಸ್ತ್ರೀ, ಕೃಪೆ, ಶಾಂತಿ ಎಂಬ ಅರ್ಥವೂ ಬರುತ್ತದೆ.

ಮುಕುಳ ಹಸ್ತವನ್ನು ಮುಖದ ಎದುರಿನಲ್ಲಿ ಕೆಳಭಾಗದಲ್ಲಿ ಆಡಿಸಿದಲ್ಲಿ ಜನರ ಸಲ್ಲಾಪ, ವಕ್ಷಸ್ಥಳದಲ್ಲಿ ಹಿಡಿದಲ್ಲಿ ಸಂತೋಷ, ಅರ್ಧ ಮುಕುಳವನ್ನು ಮೇಲ್ಭಾಗದಲ್ಲಿ ಹಿಡಿದರೆ ಶಿಶಿರ ಋತು ಎಂದು ಅರ್ಥವಾಗುವುದು. ಮುಕುಳವನ್ನು 'ಲವಕಾಲ' ಎಂಬ ಸಮಯ ಸೂಚನೆಗೂ, ರಾತ್ರಿ ಎನ್ನಲು ಅಡ್ಡಲಾಗಿಯೂ, ಒಂದು ಗಳಿಗೆಯಷ್ಟು ಕಾಲವೆನ್ನಲು ಅರ್ಧ ಮುಕುಳವನ್ನು ಅಡ್ಡಲಾಗಿಯೂ ಹಿಡಿಯುತ್ತಾರೆ. ಮುಕುಳ ಹಸ್ತವನ್ನು ಅಭಿಮುಖವಾಗಿ ಮಾಡಿದರೆ ಭೇದೋಪಾಯವೆಂದೂ, ಬಿಡಿ-ಬಿಡಿಯಾಗಿ ಹಿಡಿದರೆ ಮಂತ್ರಾಲೋಚನಶಕ್ತಿ ಎಂದೂ, ಎರಡೂ ಕೈಗಳಲ್ಲಿ ಮುಕುಳ ಹಸ್ತ ಹಿಡಿದು, ಒಮ್ಮೆ ಮೇಲಕ್ಕೆತ್ತಿ, ಮತ್ತೊಮ್ಮೆ ತೊಡೆಗಳಿಗೆ ಬೀಳುವಂತೆ ಮಾಡಿದರೆ ಒತ್ತಾಯಪೂರ್ವಕವಾಗಿ ತೆಗೆದುಕೊಳ್ಳುವುದು ಅಥವಾ ಹಠ ಎಂದು ಅರ್ಥೈಸಬಹುದು.

**ನವಗ್ರಹ ಹಸ್ತಗಳಲ್ಲೊಂದಾದ ಬುಧ(ಸೌಮ್ಯ)ಹಸ್ತಕ್ಕೆ** ಭರತಸಾರದ ಪ್ರಕಾರ ಕ್ರಮವಾಗಿ ಎಡ ಮತ್ತು ಬಲ ಕೈಯ್ಯಲ್ಲಿ ಹಿಡಿದ ಮುಕುಲ ಮತ್ತು ಸಂದಂಶಹಸ್ತಗಳನ್ನು ಎಡ ಮತ್ತು ಬಲಭುಜದ ಮೇಲಿಡಬೇಕು. **ಶ್ವಶ್ರೂ ಹಸ್ತ (ಅತ್ತೆ), ಶ್ವಶುರ (ಮಾವ)ಹಸ್ತ, ನನಾಂದೃ ಹಸ್ತ (ಗಂಡನ ಸಹೋದರಿ; ನಾದಿನಿ), ಜಾಮಾತೃ ಹಸ್ತ** (ಅಳಿಯ), **ಸೂರ್ಯಚಲನೆ ಹಸ್ತಗಳಾದ** ಸೂರ್ಯೋದಯ ಹಸ್ತ , ಮಧ್ಯಾಹ್ನ ಹಸ್ತ, ಸೂರ್ಯಾಸ್ತಮಾನ ಹಸ್ತಗಳಿಗೆ ಅಭಿನಯದರ್ಪಣವು ಮುಕುಳವನ್ನು ನಿರ್ದೇಶಿಸಿದೆ. **ಪುಷ್ಪ ಹಸ್ತಗಳಿಗೆ** ಮುಕುಲವನ್ನು ಪರ್ಯಾಯಹಸ್ತವಾಗಿಯೂ, **ಜೀವನಾವಸ್ಥೆ ಹಸ್ತಗಳಲ್ಲಿ ವಾರ್ಧಕ್ಯಕ್ಕೆ** ಎದೆಯ ಬಳಿ ಮುಕುಳ ಹಸ್ತಗಳ ಬೆರಳುಗಳನ್ನು ವಕ್ಷಸ್ಥಳದಲ್ಲಿ ವಿರಳೀಭೂತವಾಗಿ ಅಥವಾ ಸಡಿಲವಾಗಿ ಅಗಲಿಸುವುದನ್ನು ಹೇಳಿದೆ.

**ರಸ-ರುಚಿ** ಹಸ್ತಗಳಲ್ಲಿ **ಲವಣ ( ಉಪ್ಪು)** ಉದ್ವೇಷ್ಟಿತ ಮಾಡುತ್ತಿರುವ ಮುಕುಳ, **ಚತುರೋಪಾಯ ಹಸ್ತ**ಗಳಲ್ಲಿ **ದಾನ** : ಮುಕುಲವನ್ನು ಕೆಳಮುಖವಾಗಿಯೂ, **ಶಕ್ತಿ ಸಂಚಯ ಸೂಚಕ ಹಸ್ತಗಳಲ್ಲಿ ಮಂತ್ರಶಕ್ತಿ :** ಮುಕುಳ ಹಸ್ತದ ಬೆರಳುಗಳು ಸ್ವಲ್ಪ ಅಂತರವನ್ನಿಟ್ಟು ಪ್ರಸಾರಿಸುವುದು. **ಸಾಗರ ಹಸ್ತಗಳಲ್ಲಿ ಲವಣ (ಉಪ್ಪು) ಸಾಗರಕ್ಕೆ** ಮುಕುಳ ಹಸ್ತಗಳನ್ನು ಮೇಲಕ್ಕೆ ಮತ್ತು ಕೆಳಕ್ಕೆ ಎತ್ತಿ ಕೆಳಗಿಳಿಸುವ ವಿನಿಯೋಗವಿದೆ. **ಲೋಕ ಪಾಲಕರ ಹಸ್ತಗಳಲ್ಲಿ ಮಾಂಧಾತಚಕ್ರವರ್ತಿಗೆ :** ಮುಕುಳ ಮತ್ತು ಸೂಚೀ ಹಸ್ತಗಳನ್ನು; **ರಘು ಚಕ್ರವರ್ತಿಗೆ** ವ'ುುಕ'ುಳ ಮತ್ತು ಸೂಚೀ ಹಸ್ತಗಳನ್ನು ಹೇಳಿದೆ. **ವೃಕ್ಷಹಸ್ತಗಳಲ್ಲಿ ಕದಳೀಗೆ** ಚಲಿಸುತ್ತಿರುವ ಮುಕುಳ ಮತ್ತು **ಪ್ರಾಣಿ ಹಸ್ತಗಳಲ್ಲಿ ಸುಗ್ರೀವಾದಿ ವಾನರರಿಗೆ** ಮುಕುಳ ಹಸ್ತ ಅಲ್ಲಾಡಿಸುವುದು ಮತ್ತು **ವಿಷಯುಕ್ತವಾದ ಸರ್ಪಕ್ಕೆ** ಮುಕುಳ ಹಸ್ತವನ್ನು ಬಲಕೈಯ್ಯಲ್ಲೂ, ಎಡಕೈಯ್ಯಲ್ಲಿ ಚತುರವನ್ನೂ ಹಿಡಿದು ಅಲ್ಲಾಡಿಸಬೇಕೆನ್ನುತ್ತದೆ ಭರತಾರ್ಣವ, ಭರತಸಾರಾದಿ ಶಾಸ್ತ್ರಗ್ರಂಥಗಳು.

ಮುಕುಳಹಸ್ತದಿಂದ ಕಿರು ಬೆರಳನ್ನು ಬಗ್ಗಿಸುವುದು **ಪ್ರದೀಪ ಮುಕುಳಹಸ್ತ**ವೆನಿಸಿಕೊಳ್ಳುತ್ತದೆ. **ವಿನಿಯೋಗ** : ಕೊಕ್ಕರೆ.

ಮುಕುಳ ಹಸ್ತದ ತೋರುಬೆರಳನ್ನು ನಿಡಿದಾಗಿರಿಸುವುದು **ಖಂಡ-ಮುಕುಳ ಹಸ್ತ. ವಿನಿಯೋಗ** : ಇಲಿ.

**ನೃತ್ತ ಹಸ್ತಗಳ** ಪೈಕಿ ಒಂದಾದ **ನಿಷಧ** ಹಸ್ತಕ್ಕೆ ಮುಕುಲ ಹಸ್ತವನ್ನು ಕಪಿತ್ಥಹಸ್ತದಿಂದ ಸುತ್ತಿ ಹಿಡಿದುಕೊಳ್ಳುವ ಲಕ್ಷಣವೂ ಕಂಡುಬಂದಿದೆ. ಮುಕುಳದ ಹೆಬ್ಬೆರಳು ಮತ್ತು ಮುಷ್ಟಿ ಹಸ್ತದ

ತೋರುಬೆರಳನ್ನು ಜೋಡಿಸುವುದು **ಅರ್ಧ-ಮುಕುಳಹಸ್ತ.** ಭರತಾರ್ಣವದಲ್ಲಿನ ಉಲ್ಲೇಖದ ಪ್ರಕಾರ ಮುಕುಲ ಮುದ್ರೆಗಳನ್ನು ಹಿಡಿದು ಎರಡೂ ಕಿರುಬೆರಳುಗಳನ್ನು ಬೇರ್ಪಡಿಸಿ ಪರಸ್ಪರ ಚಾಲಿಸುವುದು ಮತ್ತು ಜೋಡಿಸುವುದು. **ವಿನಿಯೋಗ :** ಬೆಕ್ಕು, ಒಳ್ಳೆಯ ನಡತೆ, ಲಿಕುಚ ಹಣ್ಣು, ಸ್ತನ, ಸರಿಯಾದ ರೀತಿ, ಜಿಪುಣತನ, ತಾವರೆಯ ಮೊಗ್ಗು ಮತ್ತು ದಂಟು. ಇದರ ಬಳಕೆ ಕಡಿಮೆ. **ನಾನಾರ್ಥ ಹಸ್ತ** ವಿಭಾಗದಲ್ಲಿ ಈ 2 ಅರ್ಧ ಮುಕುಳವನ್ನು ಅನ್ಯೋನ್ಯಾಭಿಮುಖವಾಗಿಟ್ಟು ಕೆಳಭಾಗದಲ್ಲಿ ಆಡಿಸಿದರೆ ಕುಳಿತುಕೊಳ್ಳುವ ಅರ್ಥದಲ್ಲಿಯೂ, ಊರ್ಧ್ವ ಭಾಗದಲ್ಲಿ ಆಡಿಸಿದರೆ 'ಹಾಗೇ ಆಗಲಿ" ಎಂಬರ್ಥದಲ್ಲಿಯೂ, ವಕ್ಷಸ್ಥಳದಲ್ಲಿ ಆಡಿಸಿದರೆ ಮನಸ್ಸು ಎಂಬ ಅರ್ಥದಲ್ಲಿಯೂ ವಿನಿಯೋಗಿಸಬಹುದು. ಈ ಹಸ್ತವನ್ನು ಅಭಿಮುಖವಾಗಿ, ಮೇಲೆ, ಮತ್ತು ಎದೆಯಮಟ್ಟಕ್ಕೆ ಹಿಡಿದು ಅಲುಗಾಡಿಸಿದರೆ ವ್ಯಕ್ತಿಯು 'ತಾನು' ಎಂದು ಹೇಳುವುದರ ಸೂಚಕವಾಗಿ ಮತ್ತು ಪ್ರಭುತ್ವ ಸಾಧಿಸುವುದು ಮತ್ತು ಇದಕ್ಕೆ ಪೂರಕವಾಗುವ ಸಂದರ್ಭಗಳನ್ನು ಸಂವಹಿಸುತ್ತದೆ. **ಸಮಯಸೂಚೀಹಸ್ತಗಳಾದ ಘಟಿಕ ಅಥವಾ ನದಿಕ- 24 ಮಿನಿಟ್**:ಅರ್ಧಮುಕುಲವನ್ನೂ ; **ಮುಹೂರ್ತ -48 ಮಿನಿಟ್ ( 12 ಕ್ಷಣ= 1 ಮುಹೂರ್ತ)ಕ್ಕೂ** ಮುಕುಲಹಸ್ತಗಳನ್ನು ಹೇಳಲಾಗಿದೆ. ಋತುಹಸ್ತಗಳ ಪೈಕಿ **ಶಿಶಿರಕ್ಕೆ** ಅರ್ಧಮುಕುಳ ಹಸ್ತವನ್ನು ಎದುರಿಗೆ ಹಿಡಿಯಬೇಕು.

**ಒಡಿಸ್ಸಿಯಲ್ಲಿ** ಮುಕುಳ ಹಸ್ತಕ್ಕೆ **ಭಯಹಸ್ತ**ವೆಂಬ ಹೆಸರೂ ಇದೆ. **ಕಥಕಳಿಯಲ್ಲಿ** ಸೂಚೀ ಮತ್ತು ಮುಕುಳಹಸ್ತಗಳನ್ನು ಉರಿಯುತ್ತಿರುವ ದೀಪ ಎನ್ನಲು ಬಳಸುತ್ತಾರೆ.

**ಯಕ್ಷಗಾನ**ದಲ್ಲಿ ಮುಕುಳ ಹಸ್ತಕ್ಕೆ **ಪಂಚಮುದ್ರೆ** ಎಂಬ ಹೆಸರಿದ್ದು, ಬಣ್ಣಗಾರಿಕೆಯಲ್ಲಿ ಕಣ್ಣಿನ ಪಾರ್ಶ್ವಕ್ಕೆ ಹಚ್ಚುವ ಪಂಚಮುದ್ರೆಯನ್ನು ಈ ಹಸ್ತದ ನೆರವಿನಿಂದ ಬಳಸುತ್ತಿದ್ದರು.

**ನಿತ್ಯಜೀವನ**ದಲ್ಲಿ ಈ ಹಸ್ತವನ್ನು ಇಕ್ಕಟ್ಟು ಎಂಬ ಭಾವಸೂಚಕಕ್ಕೂ, ಒಟ್ಟಾಗು ಎನ್ನಲು, ಹುಡಿ ಚೆಲ್ಲಲು, ಊಟ ಮಾಡುವಲ್ಲಿ, ಮುತ್ತು ಕೊಡುವಲ್ಲಿ ಇತ್ಯಾದಿಗಳ ಸಂವಹನಕ್ಕೆ ಬಳಸಲಾಗುತ್ತದೆ.

# ದರ್ಪಣ

## ನೃತ್ಯರಂಗದ ಅನಭಿಷಿಕ್ತ ರಾಣಿ : ರುಕ್ಮಿಣಿ

*ಕಳೆದ ಸಂಚಿಕೆಯಿಂದ...*



*(ಕಲೆಯೆಂಬುದು ಹೆದರಿಕೆಯಾಗಲೀ, ಅಸಹ್ಯವಾಗಲೀ ಇಲ್ಲದ ಮುಕ್ತ ಸೃಷ್ಟಿಶೀಲ ವಾತಾವರಣದಲ್ಲಿ ಮಾತ್ರ ಬೆಳೆಯುತ್ತದೆ. ಅದಕ್ಕಾಗಿ ಎಳೆಯರಿಗೆ ಪ್ರಾರಂಭದಿಂದಲೇ ಕಲೆಯನ್ನು ಕಲಿಸುವ ವ್ಯವಸ್ಥೆ ಮಾಡಿದರು. ವ್ಯಕ್ತಿತ್ವ ನಿರ್ಮಾಣವೇ ಶಿಕ್ಷಣದ ಗುರಿ ಎಂದು ನಂಬಿದ್ದ ರುಕ್ಮಿಣೀ ಅವರಿಗೆ, ಔಪಚಾರಿಕ ತರಗತಿಗಳಲ್ಲಿ ಆರೋಗ್ಯಯುತ ಮನಸ್ಸುಗಳನ್ನು ಹುಟ್ಟುಹಾಕುವುದು ದುರ್ಲಭ ಮತ್ತು ಅವರನ್ನು ಕಲೆ, ರಸದ ಕುರಿತಂತೆ ಸಂವೇದನಾಶೀಲವಾಗುವಂತೆ ಮಾಡುವುದು ಅಸಾಧ್ಯ ಎಂಬ ಅರಿವಿತ್ತು.*

*'ಭರತನಾಟ್ಯ ಎಲ್ಲಾ ನಾಟ್ಯದ ತಾಯಿಬೇರು. ಭಾಗವತಮೇಳ ಮತ್ತು ಕೂಚಿಪುಡಿಯು ಭರತನಾಟ್ಯದ ವಿಶಾಲ ಆವರಣದೊಳಗೆ ಸಂಕಲಿತವಾಗಿದೆ' ಎಂಬುದು ಆಕೆಯ ಕಲ್ಪನೆ. ಭಾರತದ ಆತ್ಮವನ್ನು ಭರತನಾಟ್ಯ ಬಿಂಬಿಸುತ್ತದೆ. ಹಿರಿಯ ಕಲಾವಿದೆ ಬಾಲಸರಸ್ವತಿಯವರು ರುಕ್ಮಿಣೀಯಂತೆಯೇ ಸಾದಿರ್‌ನ ಪುನರುಜ್ಜೀವನಕ್ಕೆ ತಮ್ಮ ಕಲಾ ಕುಟುಂಬದ ಆಸರೆಯಲ್ಲಿ ದುಡಿದರೂ ತಮ್ಮ ಮದರಾಸ್ ಮ್ಯೂಸಿಕ್ ಅಕಾಡೆಮಿಯ ಸಂಸ್ಥೆಯಲ್ಲಿ ವಿದ್ಯಾರ್ಥಿಗಳನ್ನು ತರಬೇತುಗೊಳಿಸಿದರೂ, ನಟರಾಜನನ್ನು ರಂಗದಲ್ಲಿಡುವುದಕ್ಕಾಗಲೀ ಅಥವಾ ನಟರಾಜನನ್ನು ಸ್ತುತಿಸುವ ಪದ್ಯಗಳನ್ನು ಅಭಿನಯಿಸುವುದಕ್ಕಾಗಲೀ ಒಪ್ಪುತ್ತಿರಲಿಲ್ಲ.)*

ಬಾಲಾ ಸರಸ್ವತಿ ಮತ್ತು ರುಕ್ಮಿಣಿ ಅವರ ನಡುವಿನಲ್ಲಿ ಸಾಕಷ್ಟು ಬೌದ್ಧಿಕ ಸಂಘರ್ಷಗಳಿತ್ತು ಎಂಬುದು ಜನಜನಿತ ಅನಿಸಿಕೆ. ಆದರೆ ರುಕ್ಮಿಣೀ ಎಂದಿಗೂ ಬಾಲಸರಸ್ವತಿ ಅವರನ್ನು ತೆಗಳುವ ಗೋಜಿಗೆ ಹೋಗಲೇ ಇಲ್ಲ. ಬದಲಾಗಿ ಅವರ ಮಾರ್ಗವನ್ನು ಪ್ರಶಂಸಿಸುತ್ತಲೇ ತಮಗೆ ಆ ಶೈಲಿ ಒಗ್ಗುವುದಿಲ್ಲ ಎಂದು ಒಪ್ಪಿಕೊಂಡಿದ್ದರು.

ರಂಗದ ಮೇಲೆ ಮತ್ತು ಜೀವನದಲ್ಲಿ ಪುರುಷ ಮತ್ತು ಸ್ತ್ರೀಯರು ಧರಿಸುವ ಬಟ್ಟೆಗಳಿಂದಲೇ ಅವರ ಕಲಾದೃಷ್ಟಿ, ಅಭಿರುಚಿಯನ್ನು ಅಳೆಯಬಹುದು ಎನ್ನುತ್ತಿದ್ದ ರುಕ್ಮಿಣಿಯವರ ಸರಳ ನಡೆನುಡಿಯ ದ್ಯೋತಕವಾಗಿ ಕಲಾಕ್ಷೇತ್ರ ಸೀರೆಗಳು ಅಭಿರುಚಿಯನ್ನು ವೃದ್ಧಿಸಿತು. ರೇಶ್ಮೆ ಮತ್ತು ಹತ್ತಿಯ ಬಟ್ಟೆಗಳನ್ನು ಖರೀದಿಸಿ ಗಾಢ, ಹೊಳೆಯುವ, ಕಣ್ಣು ಕುಕ್ಕುವ ಬಣ್ಣಗಳ ಉಪಯೋಗ ಮಾಡದೆ ಉತ್ತಮ ಗುಣಮಟ್ಟದಿಂದ ಸೀರೆ ತಯಾರಿಸುತ್ತಿದ್ದರು. ಒಂದಾನೊಂದು ಕಾಲದ ಸ್ತ್ರೀಯರ ಉತ್ತಮ ಅಭಿರುಚಿಗೆ ಸಾಕ್ಷಿಯಾದ ಈ ಸೀರೆಗಳನ್ನು ಇವತ್ತಿಗೂ ಕಾಪಿಡಲಾಗಿದೆ.

ಅಂತೆಯೇ ಆಭರಣವನ್ನು ಅವರೆಂದೂ ಕರಕೌಶಲ್ಯವೆಂದೋ, ಮುತ್ತು ರತ್ನಗಳ ಬೆಲೆಬಾಳುವ ವಸ್ತುವೆಂದೋ ನೋಡಲಿಲ್ಲ. ಬದಲಾಗಿ ಒಟ್ಟು ರಸಾನುಭವಕ್ಕೆ ಕೊಡುಗೆ ನೀಡುವ ಕಲೆಯಾಗಿ ಕಂಡರು. ಆಭರಣಗಳನ್ನೂ ಅಲ್ಲಿ ವಿನ್ಯಾಸ ಮಾಡಲಾಗುತ್ತಿತ್ತು. ಸೌಂದರ್ಯ ಮತ್ತು ಮೌಲ್ಯಗಳನ್ನು ಹೆಚ್ಚು ಮಾಡುವ ನಿಟ್ಟಿನಲ್ಲಿ ಅವರು ಸಂಗ್ರಹಿಸಿದ ಆಭರಣಗಳು ಅವರ ನಿಧನದ ನಂತರ ಉದಾಹರಣೆಗೂ ಸಿಕ್ಕದೆ ಕಣ್ಮರೆಯಾಗಿವೆ.

ಕೆಲವು ನಟ್ಟುವನ್ನಾರ್‌ಗಳನ್ನು ದೂರವಿಡುವ ಮೂಲಕ ಮಧ್ಯಮ ವರ್ಗೀಯ, ಶ್ರೀಮಂತ ವರ್ಗದ ಮಹಿಳೆಯರನ್ನು ನಟ್ಟುವನ್ನಾರ್‌ಗಳಾಗಿ, ಕಲಾವಿದರಾಗಿ ಬೆಳೆಸುವಲ್ಲಿ ಶ್ರಮಿಸಿದರು. ಹೆಣ್ಣೊಂದು ಕಲಿತರೆ ಶಾಲೆಯೊಂದು

ತೆರೆದಂತೆ ಎಂಬ ಮಾತು ಸುಮ್ಮನೆಯೇ? ಹಾಗೆಂದು ಇಂತಹ ನೃತ್ಯಾದಿ ಕಲೆಗಳನ್ನು ಕಲಿಯಲು ಕೆಲವೊಂದು ಜಾತಿ–ವರ್ಗದಲ್ಲೇ ಹುಟ್ಟಿರಬೇಕು ಎಂಬ ನಿಲುವನ್ನು ಖಂಡಿಸುತ್ತಾ ಸಾರ್ವಕಾಲಿಕ ಧೋರಣೆಯನ್ನು ತಂದರು. ಇದರಿಂದಾಗಿ ಹೇರಳವಾಗಿ ಕಲಾವಿದರು ನೃತ್ಯ ಕಲಿಯುವಂತಾಯಿತು. ಇಂತಹ ಪರಿಸ್ಥಿತಿಯಿಂದಾಗಿ ಶ್ರೀಲಂಕಾದ ತಮಿಳು ಮಹಿಳೆಯರು ಭರತನಾಟ್ಯದತ್ತ ಆಕರ್ಷಿತರಾದರು.

ಕೌಟುಂಬಿಕವಾಗಿ ಮಹಿಳೆಗೆ ಕೊಡಬೇಕಾದ ಗೌರವದ ಕಡೆಗೆ ರುಕ್ಮಿಣಿ ಅವರ ಗಮನವಿತ್ತು. ಹಾಗಾಗಿ ಸಾಂಪ್ರದಾಯಿಕ ಕೌಟುಂಬಿಕ ರೀತಿರಿವಾಜುಗಳ ತದ್ವಿರುದ್ಧವೆಂಬಂತೆ ತಮ್ಮ ಎಲ್ಲಾ ರೂಪಕಗಳಲ್ಲೂ ಅವರು ಸಾರ್ವಜನಿಕವಾಗಿ ಹೆಚ್ಚು ಪರಿಣಾಮಕಾರಿಯಾದ ಪಾತ್ರಗಳನ್ನೇ ಆಯ್ದುಕೊಂಡರು. ಇದು ರಾಷ್ಟ್ರೀಯ ಸಂಸ್ಕೃತಿಯನ್ನು ಉಳಿಸಿ–ಬೆಳೆಸುವಲ್ಲಿ ಹೆಣ್ಣಿಗೂ ಜವಾಬ್ದಾರಿಯುತ ಸ್ಥಾನವಿದೆ ಎಂಬ ರಾಷ್ಟ್ರೀಯತೆಯ ಕಲ್ಪನೆಗೂ ಮಹಿಳೆಯ ಪಾತ್ರದ ಬಗ್ಗೆ ಸ್ಪಷ್ಟವಾಗುವಲ್ಲಿ ಸಹಾಯ ಮಾಡಿತ್ತು.

ಹಾಗಾಗಿ ಅದೆಷ್ಟೋ ಮಧ್ಯಮ ವರ್ಗದ ಮಹಿಳೆಯರು ತಮ್ಮ ಸಾಂಪ್ರದಾಯಿಕ ಕಟ್ಟುಪಾಡು, ಕೌಟುಂಬಿಕ ಬದ್ಧತೆಯ ಜೊತೆಯಲ್ಲಿಯೇ ನೃತ್ಯವನ್ನೂ ಅತ್ಯಪೂರ್ಣ ಗೌರವದಿಂದ ಸ್ವೀಕರಿಸಿ ಕಲಿಯಲು ಪ್ರಾರಂಭಿಸಿ ತಮ್ಮ ಅಭಿವ್ಯಕ್ತಿಯ ಸಾಧನವಾಗಿಸಿಕೊಂಡರು. ಈ ಮೂಲಕ ರಾಷ್ಟ್ರೀಯ ಪ್ರತಿನಿಧಿಯೆಂಬಂತೆ ಪ್ರತಿನಿಧಿಗಳಾಗುತ್ತಾ ಬಂದರು. ಹೀಗೆ ತಮ್ಮ ಶಿಷ್ಯಂದಿರ ಪೈಕಿ ಮಹಿಳೆಯರಿಗೆ ನೃತ್ಯದ ಪಾತ್ರಗಳಲಷ್ಟೇ ಪ್ರಧಾನ ಪಾತ್ರ ನೀಡದೆ ಅವರ ಸ್ವ–ಪ್ರಾತಿನಿಧ್ಯಕ್ಕೂ, ಸ್ವಾವಲಂಬಿತನಕ್ಕೂ ಇಂಬು ಕೊಟ್ಟರು. ಅದಾಗಲೇ ಇಂತಹ ಮನೋಧರ್ಮ ದೇವದಾಸಿ ಪದ್ಧತಿಯಲ್ಲಿ ನಶಿಸಿಹೋಗಿತ್ತು. ಹಾಗಾಗಿ ಅವರ ಸ್ಪರ್ಶ ಶೈಕ್ಷಣಿಕವಾಗಿಯೂ, ಮಾಹಿತಿದಾಯಕವಾಗಿಯೂ, ಸದೃಢವಾಗಿಯೂ ಸ್ಥಾನವನ್ನು ಕೊಟ್ಟಿತ್ತು. ಅಂತೆಯೇ ಪುರುಷರನ್ನು ಸಮಾನವಾಗಿ ತರಬೇತಿಗೊಳಿಸುತ್ತಾ ಕೊರಿಯೋಗ್ರಫಿ, ಪ್ರದರ್ಶನ ಮತ್ತು ನಿರ್ದೇಶನ ನೀಡುವಲ್ಲಿ ಸಮೃದ್ಧರನ್ನಾಗಿಸಿದರು.

ತಮಿಳಿನ ಶ್ರೇಷ್ಠ ಪಂಡಿತರೆನಿಸಿದ್ದ ಮಹಾಮಹೋಪಾಧ್ಯಾಯ ಡಾ.ಯು.ವಿ. ಸ್ವಾಮಿನಾಥ ಅಯ್ಯರ್ ದಕ್ಷಿಣ ಭಾರತದಾದ್ಯಂತ ಪ್ರವಾಸ ಕೈಗೊಂಡ ಅಂದಿನ ಕಾಲದ ಬಹುದೊಡ್ಡ ವಾಗ್ಮಿ. ಸಂಗಮ ವಂಶದ ಕಾಲದಿಂದಲೂ ಹಲವು ದಾಖಲೆಗಳು ಅಯ್ಯರ್ ಅವರ ಬಳಿಯಿದ್ದವು. ಅದಾಗಲೇ ರುಕ್ಮಿಣಿಗೆ ಒಂದಷ್ಟು ತಮಿಳು ಗ್ರಂಥ, ಓಲೆಗರಿಗಳನ್ನು ಕಾಣಿಕೆಯಾಗಿ ಪಡೆದಿದ್ದರು. ಜೊತೆಗೆ ಅವುಗಳ ಪೈಕಿ ಕೆಲವೊಂದು ಸಾಹಿತ್ಯಗಳನ್ನು ಕಲಾಕ್ಷೇತ್ರದ ಶೈಕ್ಷಣಿಕ ಪ್ರಕಟಣೆಯ ಸಲುವಾಗಿ ಭಾಷಾಂತರಿಸಲು ಮತ್ತು ಮುದ್ರಿಸಲು ರುಕ್ಮಿಣಿ ಮೊದಲ್ಗೊಂಡರು. ಹಾಗಾಗಿ 1943ರಲ್ಲಿ ಗ್ರಂಥಾಲಯ ಜನ್ಮ ತಾಳಿದಾಗ ಅಯ್ಯರ್ ಅವರಿಂದ ಪಡೆದ ಅದೆಷ್ಟೋ ಗ್ರಂಥಗಳನ್ನು ರುಕ್ಮಿಣಿ ಈ ಗ್ರಂಥಾಲಯಕ್ಕೆ ಕೊಡುಗೆ ನೀಡಿ ಅಯ್ಯರ್ ಅವರ ಹೆಸರನ್ನೇ ಸ್ಮರಣಾರ್ಥವಾಗಿ ಇರಿಸಿದರು !

1944ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದೊಂದಿಗೆ ಕಲಾಕ್ಷೇತ್ರದ ಸಂಗೀತದ ಡಿಪ್ಲೋಮಾ ಕೋರ್ಸ್ ಅಫಿಲಿಯೇಟ್ ಆಯಿತು. ಮುಂದಿನ 10 ವರ್ಷಗಳ ಅವಧಿಯಲ್ಲಿ ವಿದೇಶಿ ವಿದ್ಯಾರ್ಥಿಗಳಿಗೂ ಸಂಗೀತ, ಚಿತ್ರಕಲೆ ಮತ್ತು ನೃತ್ಯದಲ್ಲಿ ಅರೆಕಾಲಿಕ ಕೋರ್ಸ್, ಪೋಸ್ಟ್ ಡಿಪ್ಲೋಮಾ ಕೋರ್ಸ್‌ಗಳು ಪ್ರಾರಂಭವಾದವು. 1950ರ ಹೊತ್ತಿಗೆ ಭಾರತದೆಲ್ಲೆಡೆಯಿಂದಷ್ಟೇ ಅಲ್ಲದೆ ; ಟಿಬೆಟ್, ನೇಪಾಳ, ಭೂತಾನ್, ಮಲೇಷ್ಯಾ, ಶ್ರೀಲಂಕಾ, ಸಿಂಗಾಪುರ್, ಇಂಡೋನೇಷ್ಯಾ, ಯೂರೋಪ್, ಆಸ್ಟ್ರೇಲಿಯಾ, ಅಮೆರಿಕಾದಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಅಪೇಕ್ಷಿಗಳಾಗಿ ಕಾಲಿಡಲು ಸಾಧ್ಯವಾಯಿತು. ನಾರಾಯಣ ಮೆನನ್ ಹೇಳುವಂತೆ ' ಎಲ್ಲಿ ಸಾಹಿತ್ಯ, ಕಲೆ, ತತ್ವಶಾಸ್ತ್ರ, ವಿಜ್ಞಾನ ಒಂದಕ್ಕೊಂದು ಸೇರಿಕೊಳ್ಳುವುದೋ ಅಲ್ಲಿ ಕಲೆಯ ಅರಳುವಿಕೆ ಸಾಧ್ಯ.'

(ಸಶೇಷ..)

ನೂಪುರ ಭ್ರಮರಿ

... ನರ್ತನ ಜಗತ್ತಿಗೊಂದು ಪರಿಭ್ರಮಣ

## ಚಂದಾ ವಿವರ

ಲಾಭಾಂಶದ ಬಗ್ಗೆ ಆಗ್ರಹವಿಲ್ಲದ ಪತ್ರಿಕೆಯ ಖರ್ಚು ವೆಚಗಳನ್ನು ಸರಿತೂಗಿಸುವುದು ಅಷ್ಟು ಸುಲಭದ ಮಾತಲ್ಲ ಎಂಬುದು ಆತ್ಮೀಯ ಓದುಗರಾದ ನಿಮಗೆ ತಿಳಿದೇ ಇದೆ. ಅಷ್ಟಕ್ಕೂ ಮೊದಲಿನಿಂದಲೂ ನೂಪುರ ಭ್ರಮರಿಗೆ ಚಂದಾ ವಿವರ ಕಡ್ಡಾಯವಲ್ಲ ಮತ್ತು ಓದುಗರ ಸಂಪರ್ಕಕ್ಕೆ ಅದೊಂದೇ ಮಾನದಂಡವೂ ಅಲ್ಲ. ಹಾಗಾಗಿ ಎಷ್ಟೋ ಬಾರಿ ಉಚಿತವಾಗಿಯೇ ಕಳಿಸಿಕೊಟ್ಟದ್ದಿದೆ. ಆದರೆ ಹೆಚ್ಚುತ್ತಿರುವ ಪ್ರಸರಣ ಸಂಖ್ಯೆ ಮತ್ತು ಖರ್ಚು–ವೆಚ್ಚಗಳನ್ನು ಗಮನಿಸಿದಾಗ ಮತ್ತು ಪ್ರಿಯ ಓದುಗರ ಅಪೇಕ್ಷೆಯಡಿಯಲ್ಲಿ ಚಂದಾವಿವರಗಳನ್ನು ಕೊಡುತ್ತಿದ್ದೇವೆ. ರಶೀದಿಯನ್ನು ಕಳಿಸಿಕೊಡಲಾಗುವುದು. ಈಗಾಗಲೇ ಸದಸ್ಯರಾದವರು ಇದನ್ನು ಪರಿಗಣಿಸಬೇಕಿಲ್ಲ. ಮೊತ್ತವನ್ನು ಕಳಿಸುವವರು ಮನಿಯಾರ್ಡರ್ ಅಥವಾ 'ಸಂಪಾದಕರು, ನೂಪುರ ಭ್ರಮರಿ' ಎಂಬ ಹೆಸರಿಗೆ ಡಿ.ಡಿ. ಕಳಿಸುವುದು ಉತ್ತಮ. ಚೆಕ್ ಕಳಿಸುವುದಿದ್ದಲ್ಲಿ ಬ್ಯಾಂಕ್‌ಕಮಿಷನ್ ಮೊತ್ತ 40/- ರೂ. ಸೇರಿಸಿ ಕಳಿಸುವುದು. ಸಹಕರಿಸಿ.

| | | |
|---|---|---|
| ವಾರ್ಷಿಕ ಚಂದಾ : (ಅಂಚೆ ವೆಚ್ಚ ಸಹಿತ) | : | ರೂ. 100/- |
| ಪೋಷಕ | : | ರೂ. 1,000/- |
| ಮುದ್ರಣ ನಿಧಿ ( ಮಹಾಪೋಷಕ) | : | ರೂ. 3,500/- |

ವಿಮರ್ಶೆಯ ಕುರಿತಾಗಿ ಪ್ರತ್ಯೇಕ ಅಂಕಣವು ನೂಪುರ ಭ್ರಮರಿಯ ವೆಬ್‌ಸೈಟ್‌ನಲ್ಲಿ ಅನಾವರಣಗೊಂಡಿದ್ದು 2011ನೇ ಸಾಲಿನ ವಿಮರ್ಶೆಗಳನ್ನು (ಯಾವುದೇ ಪ್ರತ್ರಿಕೆ–ನಿಯತಕಾಲಿಕೆ–ವೆಬ್ ಪತ್ರಿಕೆ ಇತ್ಯಾದಿಗಳಲ್ಲಿ ಪ್ರಕಟಿತ ಅಥವಾ ಅಪ್ರಕಟಿತ ವಿಮರ್ಶೆ, ವರದಿ) ಲೇಖಕರು ಕಳಿಸಬಹುದಾಗಿದೆ. ಈ ಮೂಲಕ ವಿಮರ್ಶಾ ಕ್ಷೇತ್ರಕ್ಕೆ ಮತ್ತು ಅದರ ಪ್ರಶಸ್ತಿಗೆ ಹೆಚ್ಚಿನ ಉತ್ತೇಜನ ಮತ್ತು ಪಾರದರ್ಶಕತೆಯು ಒದಗಲಿದ್ದು ಮುಂದಿನ ಸಾಲಿನ ಪ್ರಶಸ್ತಿಯನ್ನು ಆಯ್ಕೆ ಮಾಡುವಲ್ಲಿ ಓದುಗರೂ ನಮ್ಮೊಂದಿಗೆ ಜೊತೆಯಾಗಲಿದ್ದಾರೆ. ಅದಕ್ಕೆ ಈಗಲಿಂದಲೇ ವೇದಿಕೆಯು ರೂಪುಗೊಳ್ಳುತ್ತಿದ್ದು; ಆಸಕ್ತರು www.noopurabhramari.com ನ್ನು ಸಂಪರ್ಕಿಸಬಹುದು.

ಅಂತೆಯೇ ಆಸಕ್ತರು ಉತ್ತಮ ನೃತ್ಯ /ನಾಟ್ಯ ಸಂಬಂಧೀ ಫೋಟೋಗಳಿದ್ದರೆ ಮುಖಪುಟ ವಿನ್ಯಾಸಕ್ಕಾಗಿ ಕಳಿಸಿಕೊಡಬಹುದು. ಕಲಾವಿದರ ಫೋಟೋಗಳಿದ್ದಲ್ಲಿ ಆದಷ್ಟೂ ಸೈಡ್ ಪೋಸ್ ಫೋಟೋ ಅಂದರೆ ಮುಖದ ಒಂದು ಬದಿ ಮಾತ್ರ ಕಾಣುವಂತಹ ಉತ್ತಮ ನೆರಳು ಬೆಳಕಿನ ಸಂಯೋಜನೆಯ ಛಾಯಾಚಿತ್ರಗಳನ್ನು ಕಳಿಸಿಕೊಡಿ.

**ಮುದ್ರಾರ್ಣವ**

**ಭಾರತೀಯ ನೃತ್ಯಗಳು–ವೇದ–ವಿದ್ಯೆ–ವಿಜ್ಞಾನ–ತಂತ್ರ–ಮಂತ್ರ–ಪುರಾಣ–ಯೋಗ–ವೈದ್ಯ–ಚಿಕಿತ್ಸಾ ವಿಧಾನಗಳಲ್ಲಿ ಕಂಡುಬರುವ ಹಸ್ತ –ಮುದ್ರೆಗಳ ಕುರಿತಾದ ; 1000ಕ್ಕೂ ಮಿಗಿಲು ಹಸ್ತ–ಮುದ್ರೆಗಳ ಆಳ ಅಧ್ಯಯನ, ಶ್ಲೋಕ, ಹಿನ್ನಲೆಯುಳ್ಳ, ಬಹುಮುಖೀ ಚಿಂತನೆಯ ಸಂದರ್ಶನ–ಸಮೀಕ್ಷೆ– ಪುರಾತನ ಗ್ರಂಥ ಪರಾಮರ್ಶನಗಳನ್ನೊಳಗೊಂಡ ವಿದ್ವಾಂಸರ ಮನ್ನಣೆ ಪಡೆದ ಸಂಶೋಧನಾ ಕೃತಿ. ಬೆಲೆ : 250/- ರೂ. ಸಂಪರ್ಕಿಸಿ. 99641 40927**


---

**ಪತ್ರಿಕೆಯ ಬಳಗದವರಾಗಿ ಜಿಲ್ಲಾ ಕೇಂದ್ರಗಳಲ್ಲಿ ಮೇಲ್ವಿಚಾರಣೆಯನ್ನು ನಿರ್ವಹಿಸುವವರ ಹೆಸರುಗಳು ಕೆಳಗಿನಂತಿವೆ. ಆಸಕ್ತ ಓದುಗ, ಕಲಾವಿದರು ಕೆಳಕಂಡವರನ್ನು ಸಂಪರ್ಕಿಸಿ ಪತ್ರಿಕೆಯ ಚಂದಾದಾರರಾಗಬಹುದು ; ಮುದ್ರಣ ನಿಧಿಗೆ ಸಹಕರಿಸಬಹುದು ; ಪತ್ರಿಕೆ ಮತ್ತು ಕಾರ್ಯಕ್ರಮಗಳ ಪ್ರಾಯೋಜಕತ್ವ ವಹಿಸಿಕೊಳ್ಳಬಹುದು ; ಹೆಸರು ನೋಂದಾಯಿಸಿ ಬಳಗದವರಾಗಬಹುದು.**

**ವಿಷ್ಣುಪ್ರಸಾದ್ ನಿಡ್ಡಾಜೆ,** ಪ್ರಸರಣಾಧಿಕಾರಿ ( ಮೊಬೈಲ್ : 94817 65544)
**ಎನ್. ರಾಮ ಭಟ್,** ಉಡುಪಿ (ಮೊಬೈಲ್ : 94495 92970)
**ಸಿ. ಎಸ್. ರಾಮಚಂದ್ರ ಹೆಗಡೆ,** ಬೆಂಗಳೂರು. ( ಮೊಬೈಲ್ : 99863 72503)
**ದೀಪಕ್ ಕುಮಾರ್,** ಪುತ್ತೂರು, ದಕ್ಷಿಣ ಕನ್ನಡ ( ಮೊಬೈಲ್ : 99640 23548)
**ಬಿ.ಜಿ. ನಾರಾಯಣ ಭಟ್,** ಮಡಿಕೇರಿ ( ಫೋನ್ : 08272–222709)

---

## “ನೃತ್ಯ ಮಾರ್ಗ ಮುಕುರ” ಕೃತಿ




ಮನೋರಮಾ ಬಿ.ಎನ್. ಅವರ ನೃತ್ಯಸಂವೇದನೆಯ 'ಮುದ್ರಾರ್ಣವ'– ಹಸ್ತಮುದ್ರೆಗಳ ಸಂಶೋಧನಾ ಕೃತಿಯ ತರುವಾಯ 'ಶ್ರೀ ಸಾನ್ನಿಧ್ಯ ಪ್ರಕಾಶನ'ದಿಂದ ಅನಾವರಣಗೊಂಡ ಮತ್ತೊಂದು ನೃತ್ಯ ಸಂವೇದನೆಯ ಕೃತಿ 'ನೃತ್ಯಮಾರ್ಗ ಮುಕುರ'. ಭರತನಾಟ್ಯದ ಮಾರ್ಗಪದ್ಧತಿಯ ಮಜಲುಗಳನ್ನು, ನೃತ್ಯಾಂಗಗಳನ್ನು ದಾಖಲಿಸುವ, ಸಮಗ್ರ ಸಂಕ್ಷಿಪ್ತ ವಿವರವನ್ನೀಯುವ 125 ಪುಟಗಳ ಈ ಕೃತಿ, ಆಸಕ್ತ ಸಹೃದಯರ ಪಾಲಿಗೆ ಸಾಕಲ್ಯ ದೃಷ್ಟಿಯ ಅಧ್ಯಯನಸಾಮಗ್ರಿ. ಪುಸ್ತಕದ ಬೆಲೆ: 125ರೂ.

ಭರತನಾಟ್ಯ–ಭರತನ ನಾಟ್ಯಶಾಸ್ತ್ರ ಪ್ರಸ್ತುತ ಸಂದರ್ಭದಲ್ಲಿ ಗೊಂದಲವನ್ನು ಸೃಷ್ಟಿಸಿಕೊಂಡ ಪಾರಿಭಾಷಿಕ ಪದಗಳಾಗಿ ಮಾರ್ಪಟ್ಟಿವೆ. 'ಇಂದಿನ' ಭರತನಾಟ್ಯ ಎಂಬ ನೃತ್ಯಪದ್ಧತಿಗೂ 'ಅಂದಿನ' ಭರತನ ನಾಟ್ಯಶಾಸ್ತ್ರಗ್ರಂಥಕ್ಕೂ ಇರುವ ಸಂಬಂಧಗಳ ಬಗ್ಗೆ ಗಹನವಾದ ಚರ್ಚೆಗಳು ನಡೆಯುತ್ತಿದ್ದರೂ ತಾರ್ಕಿಕ, ತಲಸ್ಪರ್ಶಿಯಾದ ಅಧ್ಯಯನಗಳಾಗಿರುವುದು ಬೆರಳೆಣಿಕೆಯಷ್ಟು. ಈ ನಿಟ್ಟಿನಲ್ಲಿ 'ನೃತ್ಯ ಮಾರ್ಗ ಮುಕುರ' ಭರತನಾಟ್ಯ ನೃತ್ಯಮಾರ್ಗಕ್ಕೆ ಹಿಡಿದ ಕೈಗನ್ನಡಿಯೇ ಆಗಿರುವುದು ಅಭಿನಂದನೀಯ – ಎಂದಿದ್ದಾರೆ ಪುಸ್ತಕಕ್ಕೆ ನಲ್ನುಡಿಯನ್ನಿತ್ತ ಖ್ಯಾತ ಕಲಾ–ಇತಿಹಾಸ ಸಂಶೋಧಕಿ ಡಾ. ಕರುಣಾ ವಿಜಯೇಂದ್ರ.

ಪುಸ್ತಕಗಳಿಗೆ ಬೆಂಗಳೂರಿನ ಸಪ್ನಾ ಬುಕ್ ಹೌಸ್, ಅಂಕಿತ ಪುಸ್ತಕ, ಗಾಂಧೀಬಜಾರ್; ಗೋಖಲೆ ಸಂಸ್ಥೆ, ಬಸವನಗುಡಿ, ರಾಷ್ಟ್ರೋತ್ಥಾನ, ಚಾಮರಾಜಪೇಟೆ ಅಥವಾ ನೂಪುರ ಭ್ರಮರಿ ಪತ್ರಿಕೆ, ಉಡುಪಿ ವಲಯದ ಪ್ರಸರಣಾ ಮುಖ್ಯಸ್ಥ ರಾಮ ಭಟ್ ಅವರನ್ನು ಸಂಪರ್ಕಿಸಬಹುದು.